ಕಲ್ಯಾಣ ಕರ್ನಾಟಕದ ಪ್ರತಿಬಿಂಬ...... ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar ಕನ್ನಡ ದಿನಪತ್ರಿಕೆ

ಕೊಪ್ಪಳ । ರಾಯಚೂರು । ಬಳ್ಳಾರಿ । ವಿಜಯನಗರ । ಯಾದಗಿರಿ । ಬೆಂಗಳೂರು । ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ. ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 276 | Tuesday 25-03-2025 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

## ಹನಿಟ್ರ್ಯಾಪ್ ವಿವಾದ

# ದೂರು ದಾಖಲಿಸಲು ರಾಜಣ್ಣ ವಿಳಂಬ

## ಕಾಂಗ್ರೆಸ್ ಹೈಕಮಾಂಡ್ ಭೇಟಿಗೆ ಮುಂದಾದ ಸಚಿವರು, ಶಾಸಕರು



**ಬೆಂಗಳೂರು:** ರಾಜ್ಯದಲ್ಲಿ ಹನಿಟ್ರ್ಯಾಪ್ ಯತ್ನ ಪ್ರಕರಣವು ತೀವ್ರ ವಿವಾದಕ್ಕೆ ಕಾರಣವಾಗಿದ್ದು, ರಾಜ್ಯ ಕಾಂಗ್ರೆಸ್‌ನಲ್ಲಿನ ಪ್ರಭಾವಿ ನಾಯಕನ ಪಾತ್ರದ ಬಗ್ಗೆ ಸಚಿವರು ಮತ್ತು ಶಾಸಕರ ಗುಂಪು ಹೈಕಮಾಂಡ್ ಅನ್ನು ಭೇಟಿ ಮಾಡಲು ಯೋಜಿಸುತ್ತಿದೆ ಎನ್ನಲಾಗಿದೆ.

ಸಹಕಾರ ಸಚಿವ ಕೆಎನ್ ರಾಜಣ್ಣ ಅವರನ್ನು ರಾಜಕೀಯವಾಗಿ ಮುಗಿಸಲು ಪ್ರಭಾವಿ ನಾಯಕರೊಬ್ಬರು ಹನಿಟ್ರ್ಯಾಪ್‌ನಲ್ಲಿ ಸಿಲುಕಿಸಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಈಮಧ್ಯೆ, ಸೂಕ್ತ ಸಮಯದಲ್ಲಿ ಗೃಹ ಸಚಿವರಿಗೆ ದೂರು ನೀಡುವುದಾಗಿ ಸಚಿವ ರಾಜಣ್ಣ ಸೋಮವಾರ ಹೇಳಿದ್ದಾರೆ. ಇದೀಗ ದೂರು ದಾಖಲಿಸಲು ವಿಳಂಬ ಮಾಡುತ್ತಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತಿದೆ.

ಗುರುವಾರ ವಿಧಾನಸಭೆ ಅಧಿವೇಶನದಲ್ಲಿ ಸಹಕಾರ ಸಚಿವ ಕೆಎನ್ ರಾಜಣ್ಣ, ಪಕ್ಷಾತೀತವಾಗಿ ಕನಿಷ್ಠ 48 ಶಾಸಕರನ್ನು ಹನಿಟ್ರ್ಯಾಪ್ ಮಾಡಲಾಗಿದೆ ಮತ್ತು ಈ ಜಾಲ ದೇಶಾದ್ಯಂತ ಹರಡಿದೆ. ಅನೇಕ ಕೇಂದ್ರ ಸಚಿವರು ಸಹ ಇದರಲ್ಲಿ ಸಿಲುಕಿದ್ದಾರೆ. ಪ್ರತಿಸ್ಪರ್ಧಿಗಳು ತಮ್ಮನ್ನು ಹನಿಟ್ರ್ಯಾಪ್ ಮಾಡಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದರು.

ಇದಕ್ಕೆ ಪ್ರತಿಕ್ರಿಯೆಯಾಗಿ, ಗೃಹ ಸಚಿವ ಜಿ ಪರಮೇಶ್ವರ ಅವರು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗುವುದು ಎಂದು ಘೋಷಿಸಿದರು. ಆದಾಗ್ಯೂ, ಸಚಿವ ರಾಜಣ್ಣ ಇನ್ನೂ ದೂರು ದಾಖಲಿಸಿಲ್ಲ

ಈ ಆರೋಪಗಳ ಬಗ್ಗೆ ನ್ಯಾಯಾಂಗ ಅಥವಾ ಸಿಬಿಐ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಪ್ರತಿಪಕ್ಷಗಳು ವಿಧಾನಸಭೆಯಲ್ಲಿ ಗದ್ದಲ ಎಬ್ಬಿಸಿದವು. ಇದು ವಿಧಾನಸಭೆಯಲ್ಲಿ ಪ್ರತಿಭಟನೆಗಳಿಗೆ ಕಾರಣವಾಯಿತು ಮತ್ತು ಅಂತಿಮವಾಗಿ 18 ಬಿಜೆಪಿ ಶಾಸಕರನ್ನು ಆರು ತಿಂಗಳ ಕಾಲ ಅವಧಿಗೆ ಅಮಾನತು ಮಾಡಲಾಗಿದೆ.

ಹನಿಟ್ರ್ಯಾಪ್ ಯತ್ನದ ಹಿಂದೆ ಉಪ ಮುಖ್ಯಮಂತ್ರಿ ಮತ್ತು ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವಕುಮಾರ್ ಅವರ ಕೈವಾಡವಿದೆ ಎಂದು ಬಿಜೆಪಿ ಶಾಸಕ ಎನ್ ಮುನಿರತ್ನ ಆರೋಪಿಸಿದ್ದಾರೆ.

ಈ ಆರೋಪಗಳನ್ನು ನಿರಾಕರಿಸಿದ ಡಿಕೆ ಶಿವಕುಮಾರ್, ಜನರು ಯಾವುದೇ ಕಾರಣವಿಲ್ಲದೆ ನಾಯಕರನ್ನು ಹನಿಟ್ರ್ಯಾಪ್ ಮಾಡಲು ಪ್ರಯತ್ನಿಸುವುದಿಲ್ಲ ಎಂದಿದ್ದಾರೆ.

ಸಮಸ್ಯೆಯ ಗಂಭೀರತೆಯನ್ನು ಅರಿತ ಹೈಕಮಾಂಡ್, ದೂರು ದಾಖಲಿಸುವುದಕ್ಕೆ ತಡೆ ನೀಡಿದ್ದು, ಮುಂದಿನ ನಿರ್ದೇಶನಗಳಿಗಾಗಿ ಕಾಯುವಂತೆ ಸಚಿವ ರಾಜಣ್ಣ ಅವರಿಗೆ ಸೂಚಿಸಿದೆ ಎಂದು ಮೂಲಗಳು ಸೂಚಿಸುತ್ತವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರೂ ಆಗಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಹನಿಟ್ರ್ಯಾಪ್ ವಿವಾದದ ಬಗ್ಗೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಮಾಹಿತಿ ಹಂಚಿಕೊಳ್ಳಲು ಶೀಘ್ರದಲ್ಲೇ ದೆಹಲಿಗೆ ತೆರಳಲಿದ್ದಾರೆ ಎಂದು ಮೂಲಗಳು ದೃಢಪಡಿಸಿವೆ.

ಜಾರಕಿಹೊಳಿ ಅವರು ರಾಹುಲ್ ಗಾಂಧಿ ಅವರೊಂದಿಗೆ ಸಭೆ ನಡೆಸಲು ಮೂರು ದಿನಗಳ ಕಾಲ ದೆಹಲಿಯಲ್ಲಿಯೇ ಇರುತ್ತಾರೆ ಎಂದು ವರದಿಯಾಗಿದೆ.

ಹೆಚ್ಚುವರಿಯಾಗಿ, ಸಚಿವರು ಮತ್ತು ಶಾಸಕರ ಗುಂಪೊಂದು ಅವರೊಂದಿಗೆ ತೆರಳುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ರಾಜಣ್ಣ, ತಮ್ಮ ದೂರು ವಿಳಂಬವಾಗುತ್ತಿರುವುದಕ್ಕೆ ಪ್ರತಿಕ್ರಿಯಿಸಿ, 'ನಾನು ಸೂಕ್ತ ಸಮಯದಲ್ಲಿ ದೂರು ಸಲ್ಲಿಸುತ್ತೇನೆ. ಅದಕ್ಕೆ ನಾನು ಇನ್ನೂ ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿಲ್ಲ' ಎಂದು ಹೇಳಿದರು.

ಹನಿ ಟ್ರ್ಯಾಪ್ ಪ್ರಯತ್ನದ ಹಿಂದೆ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರ ಕೈವಾಡವಿದೆ ಎಂಬ ಬಿಜೆಪಿ ಶಾಸಕ ಮುನಿರತ್ನ ಅವರ ಆರೋಪಕ್ಕೆ ಸಂಬಂಧಿಸಿದಂತೆ, ಸಚಿವ ರಾಜಣ್ಣ, 'ಅದರ ಬಗ್ಗೆ ನನಗೆ ತಿಳಿದಿಲ್ಲ' ಎಂದು ಪ್ರತಿಕ್ರಿಯಿಸಿದರು.

ರಾಜಣ್ಣ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕೆಂಬ ಮುನಿರತ್ನ ಅವರ ಬೇಡಿಕೆ ಬಗ್ಗೆ ಕೇಳಿದಾಗ, 'ಮೊದಲು, ಬಿಜೆಪಿ ಶಾಸಕ ಮುನಿರತ್ನ ಅವರು ಉಪಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಆಪ್ತರಾಗಿದ್ದರು. ಆದ್ದರಿಂದ ಅವರು ಪರೀಕ್ಷೆಗೆ ಒಳಗಾಗಬೇಕು' ಎಂದು ಹೇಳಿದರು.

ರಾಜ್ಯದಲ್ಲಿ ನ್ಯಾಯಾಧೀಶರು ಮತ್ತು ಕೇಂದ್ರ ನಾಯಕರು ಸೇರಿದಂತೆ ಸುಮಾರು 48 ವ್ಯಕ್ತಿಗಳನ್ನು ಹನಿಟ್ರ್ಯಾಪ್ ಮಾಡಲಾಗಿದೆ ಎಂದು ರಾಜಣ್ಣ ಈ ಹಿಂದೆ ಸದನದಲ್ಲಿ ಹೇಳಿಕೆ ನೀಡಿದ್ದರು.

## ಕೂಡ್ಲಿಗಿ ತಾಲೂಕಿನಲ್ಲಿ ವಿಶ್ವ ಜಲ ದಿನಾಚರಣೆ



● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ :ಮಾರ್ಚ್ 24 :** ಜಿಲ್ಲಾ ಪಂಚಾಯತ್ ವಿಜಯನಗರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ವಿಜಯನಗರ, ತಾಲೂಕು ಪಂಚಾಯತ್ ಕೂಡ್ಲಿಗಿ, ಗ್ರಾಮ ಪಂಚಾಯತ್ ರಾಮದುರ್ಗ ವತಿಯಿಂದ ಫೀಡ್ ಬ್ಯಾಕ್ ಪೌಂಡೇಶನ್ ಸಹಯೋಗದೊಂದಿಗೆ ಇಂದು ರಾಮದುರ್ಗ ಗ್ರಾಮದಲ್ಲಿ *ವಿಶ್ವ ಜಲ ದಿನಾಚರಣೆ* ಅಂಗವಾಗಿ ಶಾಲಾ ಮಕ್ಕಳೊಂದಿಗೆ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಜಾಗೃತಿ ಜಾಥವು ವಿವಿಧ ಫಲಕಗಳನ್ನು ಹಿಡಿದ ಮಕ್ಕಳ ಘೋಷವಾಕ್ಯದೊಂದಿಗೆ ಗ್ರಾಮದ ಪ್ರಮುಖ ರಸ್ತೆ–ಬೀದಿಗಳಲ್ಲಿ ಸಂಚರಿಸಿ, ಸಾರ್ವಜನಿಕರಲ್ಲಿ ನೀರಿನ ಸಂರಕ್ಷಣೆ ಹಾಗೂ ಮಿತ ಬಳಕೆ ಕುರಿತು ಅರಿವು ಮೂಡಿಸಲಾಯಿತು. ಜಾಥಾಕೂ ಮುನ್ನ ರಾಮದುರ್ಗ ಗ್ರಾಮದ ಸರ್ಕಾರಿ ಶಾಲೆಯ ಆವರಣದಲ್ಲಿ ವಿಶ್ವ ಜಲ ದಿನಾಚರಣೆ ನಿಮ್ಮಿತ್ತ ಏರ್ಪಡಿಸಿದ್ದ ರಸಪ್ರಶ್ನೆ ಕಾರ್ಯಾಗಾರದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ರಾಜಭಕ್ಷಿ, ಎಸ್ ಡಿ ಎಂ ಸಿ ಅಧ್ಯಕ್ಷ ಖಾಜಾ ಹುಸೇನ್, 24/7 ಘೋಷಣೆ ಅನುಷ್ಠಾನದ ಜಿಲ್ಲಾ ಸಂಯೋಜಕ ಅಭಿಷೇಕ್, ಶಾಲೆಯ ಪ್ರಭಾರ ಮುಖ್ಯ ಗುರುಗಳಾದ ಶಾಹಿಲ, ಸಹ ಶಿಕ್ಷಕರಾದ ಕುಬೇಂದ್ರ ನಾಯ್ಕ್, ಅನಿತಾ, ಶಾಂತ, ರಮ್ಯಾ, ಹೊನ್ನುರುಸ್ವಾಮಿ, ಮಲ್ಲೇಶ, ಗಣೇಶ, ಗ್ರಾ.ಪಂ ಸಿಬ್ಬಂದಿ ಎಸ್ ಹೆಚ್ ಜಿ ಮಹಿಳಾ ಸ್ವ–ಸಹಾಯ ಸಂಘದ ಪ್ರತಿನಿಧಿಗಳು, ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ವರದಿ ಈಜಿ ರೆಡ್ಡಿ**

# ಅನಿಲ್ ಆಚಾರ್ ಇವರಿಂದ ಶ್ರೀ ಚಂಡಿ ಹೋಮ ಮತ್ತು ಪೂರ್ಣಾಹುತಿ ಪೂಜೆಗಳು ಮತ್ತು ಪಂಚಾಂಗ ಬಿಡುಗಡೆ



● ವಾರ್ತಾಲೋಕ ವಾರ್ತೆ

ಬಳ್ಳಾರಿ ಮಾರ್ಚ್. 24: ನಗರದ ಸತ್ಯನಾರಾಯಣಪೇಟೆಯಲ್ಲಿರುವ ಶ್ರೀಗುರು ರಾಘವೇಂದ್ರ ಶ್ರೀ ಸುಶಮೀಂದ್ರ ಮಂಗಳ ಮಂಟಪದ ಆವರಣದಲ್ಲಿ ಜ್ಯೋತಿಶ್ಯರತ್ನ, ಶ್ರೀ ಮಧ್ವವಿಜಯ, ಹಾಗೂ ರಾಘವೇಂದ್ರ ವೈಭವಪ್ರಶಸ್ತಿಪುರಸ್ಕೃತರಾದ ಶ್ರೀಗುರುರಾಜ ಕುಲಕರ್ಣಿಯವರಿಂದ ವಿರಚಿತ 15 ನೇ ವರ್ಷದ ಶ್ರೀ ಗೌತಮ ಸೂರ್ಯಸಿದ್ಧಾಂತ ಪಂಚಾಂಗ ವನ್ನು ಶ್ರೀಯುತ ಅನಿಲ್ ಆಚಾರ್ ಬಿಡುಗಡೆಗೊಳಿಸಿದರು.

ಇದಕ್ಕೂ ಮುಂಚೆ ಶ್ರೀ ಚಂಡಿ ಹೋಮ ಪೂರ್ಣಾಹುತಿಯ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಶ್ರೀ ಪ್ರಸನ್ನ ಮಾಧವ ಗುಡಿ (ಸ್ವರ ಮಹಾ ಯಜ್ಞಯ್ ಸಂಶೋಧಕರು ಹಾಗೂ ಸಂಗೀತ ಚಿಕಿತ್ಸಕರು, ಆಕಾಶವಾಣಿ ಕಲಾವಿದರು) ಇವರು ಸಂಗೀತ ಚಿಕಿತ್ಸಾ ಕಾರ್ಯಕ್ರಮ ( Music Therapy) ನಡೆಸಿಕೊಟ್ಟರು.

ಕಾರ್ಯಕ್ರಮವನ್ನು ಕುಮಾರಿ ವಸುಧಾ ಹಾಗೂ ಸಂಜೀವಪ್ರಸಾದ್ ಇವರು ನಿರೂಪಿಸಿದರು.

ಅನೇಕ ಭಜನಾ ಮಂಡಳಿಗಳಿಂದ ಗೀತಗಾಯನ ಹಾಗೂ ಮಕ್ಕಳಿಂದ ಭರತನಾಟ್ಯ ಕಾರ್ಯಕ್ರಮ ಕಾರ್ಯಕ್ರಮ ಸೇರಿದಂತೆ ವಿವಿಧ ಸಾಂಸ್ಕೃತಿ ಕಾರ್ಯಕ್ರಮಗಳು ಜರುಗಿದವು.

ಇದೇಸಂದರ್ಭದಲ್ಲಿ ಅಪ್ಪಯ್ಯಭಟ್ ವಿರಚಿತ ಜ್ಞಾನ–ವಿಜ್ಞಾನ–ತತ್ವಜ್ಞಾನ ಯೋಗ ಸಾರ ಸಂಗ್ರಹ ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಸಾಧಕರಾದ ಡಾ.ಬಿ.ಕೆ. ಸುಂದರ್ ಹಾಗೂ ಅನುಪಮಾ ಸುಂದರ್,

ಡಾ.ವಿನಯ್ ಕುಲಕರ್ಣಿ ಹಾಗೂ ಡಾ.ವಂದನಾ ಕುಲಕರ್ಣಿ, ಬಿ.ಕೆ.ಬಿ.ಎನ್. ಮೂರ್ತಿ, ಮಾಜಿ ಕಾರ್ಪೋರೇಟರ್ ನೇಮಕಲ್ಲುರಾವ್, ಕಲ್ಯಾಣ ಕರ್ನಾಟಕ ಬ್ರಾಹ್ಮಣ ಸಂಘದ ಸತೀಶ್ ದೇಸಾಯಿ, ಗಿರಿಪ್ರಸಾದ್, ನೋಟರಿ ಅಧ್ಯಕ್ಷರಾದ ರಾಘವೇಂದ್ರ ಮೋಹನ್, ಸತೀಶ್ ಕಾಂಡ್ರ ಹಾಗೂ ಸೌಜನ್ಯ ಇವರನ್ನು ಸನ್ಮಾನಿಸಲಾಯಿತು.

ಡಾ.ಮಾಧವದಿಗ್ಗಾವಿ,ವ್ಯಾಸಾರಾಜಾಚಾರ್, ರಾಘವೇಂದ್ರ, ಡಿ.ಕೆ.ಪ್ರಸಾದ್, ಮಾಸ್ಟರ್ ಶ್ರೀನಿವಾಸ್ ಹುನಗುಂದ್, ಡಿ.ಗಿರಿ ಸಮಾಜ ಸೇವಕರು, ಆಶೋಕ್ ಕುಲಕರ್ಣಿ ವ್ಯವಸ್ಥಾಪಕರು, ಬಾದನಹಟ್ಟಿ ರಘುನಂದನ್, ಶ್ರೀನಿವಾಸ ಕರಣಂ, ಭೀಮರಾವ್ ಕುಲಕರ್ಣಿ,

ತೆರಿಗೆ ಸಲಹೆಗಾರರಾದ ಭರತ್ ಕುಮಾರ್, ಶ್ರೀಧರ್ ಪಾರ್ಥಸಾರಥಿ ಹಾಗೂ ಡಾ.ಶ್ರೀನಾಥ್ ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ನೆರೆದ ಭಕ್ತಾದಿಗಳಿಗಳು ವಿಶ್ವವಸುನಾಮ ಸಂವತ್ಸರದ ಗೌತಮಸೂರ್ಯ ಸಿಧ್ಧಾಂತ ಪಂಚಾಂಗ ಹಾಗೂ ಯೋಗಸಾರ ಸಂಗ್ರಹ ಪುಸ್ತಕವನ್ನು ಪಡೆದು ಕಾರ್ಯಕ್ರಮದ ಸದುಪಯೋಗ ಹೊಂದಿದರು.

**ವರದಿ : ಇಜಿ ರೆಡ್ಡಿ**

# ಕುಡಗುಂಟಿ ಗ್ರಾಮದ ಶ್ರೀ ಗುದ್ದಿ ಬಸವೇಶ್ವರ ಲಘು ರಥೋತ್ಸವ ವಿಜೃಂಭಣೆಯಿಂದ ನೆರವೇರಿತು



● ವಾರ್ತಾಲೋಕ ವಾರ್ತೆ

**ಕೊಪ್ಪಳ :ಮಾರ್ಚ್ 24 :** ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಡಗುಂಟಿ ಗ್ರಾಮದಲ್ಲಿ ಶ್ರೀ ಗುದ್ದಿ ಬಸವೇಶ್ವರ ಪ್ರತಿಮೆ ಬೆಳಗ್ಗೆ ಅಭಿಷೇಕ್ ಪುಷ್ಪ ಅರ್ಚನೆ ಮಾಡಿಸಿ ನಂತರ ನಾನಾ ತರಹದ ಸಿಹಿತಿನಿಸು ಗಳನ್ನು ಭಕ್ತರಿಗೆ ಪ್ರಸಾದ ರೂಪದಲ್ಲಿ ವಿತರಣೆ ಮಾಡಲಾಯಿತು ಶ್ರೀ ಗುದ್ದಿ ಬಸವೇಶ್ವರ ಲಘು ರಥೋತ್ಸವಕ್ಕೆ ಯಲಬುರ್ಗಾ ದ ಶ್ರೀ ಸಿದ್ದರಾಮೇಶ್ವರ ಸ್ವಾಮಿ ಹಿರೇಮಠದ ಶಿವಾಚಾರ್ಯ ಮಹಾಸ್ವಾಮಿಗಳುಚಾಲನೆನೀಡಿದರುಅದ್ದೂರಿಯಾಗಿ ಭಕ್ತರ ಸಮ್ಮುಖದಲ್ಲಿ ಜರುಗಿತು.

ಜಾತ್ರಾ ಮಹೋತ್ಸವದಲ್ಲಿ ಲಘು ರಥೋತ್ಸವಕ್ಕೆ ಕಳಶ ಸ್ಥಾಪನೆ ಮಾಡಿ ಹೂವಿನ ಹಾರ ಹಾಕಿ ಚಾಲನೆ ನೀಡಲಾಯಿತು ಭಕ್ತರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ಉತ್ತಿ ಬಾಳೆಹಣ್ಣು ಎಸೆಯುವ ಮೂಲಕ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆದ ನಂತರ ಮೈಲಾರಿಯವರ ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯುವುದು ಬಹುತೇಕ ಸದಸ್ಯರು ಸಿಬ್ಬಂದಿಗಳು ಸೇರಿದಂತೆ ರಸಮಂಜರಿ ಈ ಕಾರ್ಯಕ್ರಮದಲ್ಲಿ ಸಾವಿರಾರು ಜನರು ಸಮ್ಮುಖದಲ್ಲಿ ಸಂತೋಷದಿಂದ ಯಶಸ್ವಿಯಾಗಿ ನೆರವೇರಿಸಲಾಗುವುದು ಎಂದು ಗ್ರಾಮದ ಮುಖಂಡರು ಹೇಳಿದರು

ಈ ಕಾರ್ಯಕ್ರಮದಲ್ಲಿ ಗ್ರಾ.ಪ. ಪಂಚಾಯಿತಿ ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಸದಸ್ಯರು ಭಾಗವಹಿಸಿದ ಎಲ್ಲ ಊರಿನ ಮುಖಂಡರು ಯುವಕ ಯುವತಿಯರು ಹಾಗೂ ಸದ್ಭಕ್ತರು ಉಪಸ್ಥಿತರಿದ್ದರು

**ವರದಿ ಮಂಗಳೇಶ ಮೆತಗಲ್ ಮಂಗಳೂರು**

# ರಕ್ತದಾನಿಯನ್ನ ಯಾರು ನೋಡದಿದ್ದರೂ ಸಹ, ಭಗವಂತ ಅವರನ್ನ ನೋಡುತ್ತಾನೆ: ಉಷಾದೇವಿ ಹಿರೇಮಠ



● ವಾರ್ತಾಲೋಕ ವಾರ್ತೆ

**ಕೊಪ್ಪಳ : ಮಾರ್ಚ್ 24 :** ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಕಾನೂನು ಮಹಾವಿದ್ಯಾಲಯ ಕೊಪ್ಪಳ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕೊಪ್ಪಳ ಹಾಗೂ ನಿಮ್ಮ ಸಂಸ್ಥೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ರೆಡ್ ಕ್ರಾಸ್ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಕಾನೂನು ಮಹಾವಿದ್ಯಾಲಯ ಕೊಪ್ಪಳದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ರಕ್ತದಾನ ಶಿಬಿರ ಹಾಗೂ ಭಾರತ ಸ್ವತಂತ್ರ ಸಂಗ್ರಾಮದ ಕ್ರಾಂತಿಕಾರಿ ಹೋರಾಟಗಾರರಾದ ಭಗತ್ ಸಿಂಗ್ ರಾಜಗುರು ಸುಖದೇವ್ ಅವರ ಬಲಿದಾನದದಿನದಂದುಗೌರಪೂರ್ವಕ ಪ್ರಣಾಮಗಳು ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಚಾರ್ಯರಾದ ಔಷಧಿ ಹಿರೇಮಠ ಮಾತನಾಡಿ ರಕ್ತದಾನವನ್ನು ಯಾರು ನೋಡದಿದ್ದರೂ ಸಹ ಭಗವಂತ ನಿಮ್ಮನ್ನು ನೋಡುತ್ತಾನೆ ಮತ್ತು ನಿಮಗೆ ಒಳ್ಳೆಯದನ್ನು ಕೂಡ ಮಾಡುತ್ತಾನೆ, ಬೇರೊಬ್ಬರಿಗೆ ರಕ್ತದಾನ ಮಾಡುವುದರಿಂದ ನಮಗೆ ಒಳ್ಳೆಯದು ಆಗುತ್ತೆ. ರಕ್ತದಾನ ಮಾಡುವುದರಿಂದ ಅನೇಕರಿಗೆ ಉಪಯೋಗವಾಗುತ್ತದೆ ಮತ್ತು ಮಹಾನ ವ್ಯಕ್ತಿಗಳಾದ ಭಗತ್ ಸಿಂಗ್ ಸುಖದೇವ ರಾಜಗುರು ಅವರು ದೇಶಕ್ಕೆ ನೀಡಿದ ಕೊಡುಗೆ ಅಪಾರ ಎಂದರು. ಪ್ರಾಸ್ತಾವಿಕವಾಗಿ ಎಸ್‌ಎಂ ಬಸವರಾಜ್ ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿ ಹಾಗೂ ಉಪರಾಚಾರ್ಯರಾದ ಮಾತನಾಡಿ ದಾನ ದಾನಗಳಲ್ಲಿ ಶ್ರೇಷ್ಠವಾದ ದಾನ ರಕ್ತದಾನ, ರಕ್ತದಾನದ ಮಹತ್ವವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾಕ್ಟರ್ ಶಿವಕುಮಾರ್ ಪಾಟೀಲ್ ಮಾತನಾಡಿ ಎರಡು ಮೂರು ಶತಮಾನಗಳ ಕಾಲ ನಮ್ಮನ್ನು ಯುರೋಪಿಯನ್ನರು ಆಳ್ವಿಕೆ ಮಾಡಿದ್ದಾರೆ ಸ್ವತಂತ್ರಕ್ಕಾಗಿ ಅನೇಕರು ಪ್ರಾಣವನ್ನು ಬಿಟ್ಟಿದ್ದಾರೆ ಬ್ರಿಟಿಷರನ್ನು ದೇಶ ಬಿಟ್ಟು ಹೋಗಲಾಡಿಸಲು ತೀವ್ರಗಾಮಿಯಾಗಿ ರಕ್ತಚಳ್ಳಿ ಹೋರಾಟ ಮಾಡಿದ್ದಾರೆ,

ಭಗತ್ ಸಿಂಗ್ ರಾಜಗುರು ಸುಖದೇವ ಅವರಂತಹ ಮಹಾನ್ ಕ್ರಾಂತಿಕಾರಿ ಮನೋಭಾವನೆಗಳನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು ಮತ್ತು ಅವರಂತಹ ದೇಶ ಅಭಿಮಾನವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಮತ್ತುಈಗಿನ ಯುವ ಜನತೆ ರಕ್ತದಾನ ಮಾಡಬೇಕಿರುವುದು ಅಗತ್ಯವಾಗಿದೆ ಸಂವಿಧಾನ ಒಂದು ಕಾರ್ಯಕ್ರಮದಲ್ಲಿ 1 ಲಕ್ಷ ಯೂನಿಟ್ ರಕ್ತವನ್ನು ನೀಡಿದ್ದೆವು, ಸಂವಿಧಾನ ಎರಡರಲ್ಲಿ 1 ಲಕ್ಷದ 50,000 ಯೂನಿಟ್ ಕಿಂತ ಹೆಚ್ಚು

ರಕ್ತದಾನವನ್ನುಮಾಡುವುದರಮೂಲಕ ಗಿನ್ನಿಸ್ ರೆಕಾರ್ಡ್ ದಾಖಲಿಸಬೇಕಿದೆ ನಮ್ಮೆಲ್ಲರ ಸಹಕಾರವು ಕೂಡ ಅತಿ ಅವಶ್ಯಕವಾಗಿದೆ, ರಕ್ತದಾನದಿಂದ ಅನೇಕ ರೀತಿಯ ಅನುಕೂಲಗಳು ಕೂಡ ನಮಗೆ ಆಗುತ್ತವೆ ಎಂದರು, ಕಾನೂನು ಮಹಾವಿದ್ಯಾಲಯದಿಂದ 18 ಜನಕ್ಕೂಹೆಚ್ಚು ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಈ ಸಂದರ್ಭದಲ್ಲಿ ಡಾ. ಕಸ್ತೂರಿ ಡಾಕ್ಟರ್ ಸುಧಾಕರ್ ಡಾಕ್ಟರ್ ಲಿಂಗರಾಜ ಡಾ. ಭಾಗ್ಯಶ್ರೀ ಮತ್ತು ದೇವೇಂದ್ರಪ್ಪ ಹಿಟ್ನಾಳ, ಕಾಲೇಜಿನ ಉಪನ್ಯಾಸಕ ವರ್ಗದವರು ಮುದ್ದು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸುಧಾ ಸಂಗಡಿಗರು ಪ್ರಾರ್ಥನೆ ಗೀತೆ ಹಾಡಿದರು ಸ್ವಾಗತ ಕಾರ್ತಿಕ್ ಕೋರಿದನು, ವಂದನಾರ್ಪಣೆಯನ್ನು ಪ್ರಗತಿ ನೆರವೇರಿಸಿದರು ಮತ್ತು ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ಹುಲಿಗೆಮ್ಮ ನಡೆಸಿಕೊಟ್ಟರು.

**ವರದಿ ಮಂಗಳೇಶ ಮೆತಗಲ್**

# ಪ್ರೀತಿ ಮಾತಿನಿಂದ ತುಟಿ ಹೊಲಿಯುವ ಸಂಚು ಭಾಷೆಯಲ್ಲಿದೆ: ಕೆ.ವಿ.ಪ್ರಭಾಕರ್

# ಮರ್ಯಾದೆಗೇಡು ಹತ್ಯೆಗಳು ವಿಷಮಾನತೆ ಸಮಾಜದ ಮನಸ್ಥಿತಿಯ ಭಾಷೆ: ಕೆ.ವಿ.ಪಿ

## ಭೂಮಿಯ ಅರ್ಧದಷ್ಟಿರುವ ಮಹಿಳೆಯರ ಮುಂದೆ ಆಕಾಶದ ಅರ್ಧಭಾಗ ಧಕ್ಕಿಸಿಕೊಳ್ಳುವ ಸವಾಲಿದೆ: ಕೆ.ವಿ.ಪ್ರಭಾಕರ್







**ಬೆಂಗಳೂರು :** ಹೆಣ್ಣಿನ ಬಗ್ಗೆ ಬಳಕೆ ಆಗುವ ಭಾಷೆ ಗಂಡಾಳಿಕೆಯ ಮನಸ್ಥಿತಿಯದ್ದೇ ಆಗಿದೆ. ಪ್ರೀತಿ ಮಾತಿನಿಂದ ತುಟಿ ಹೊಲಿಯುವ ಸಂಚು, ಮರ್ಯಾದೆಗೇಡು ಹತ್ಯೆಗಳಲ್ಲಿ ಕಾಣುವ ದ್ವೇಷ ಕೂಡ ಗಂಡಾಳಿಕೆಯ ಭಾಷೆಯೇ ಆಗಿದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

ಎಂಟನೇ ಅಖಿಲ ಕರ್ನಾಟಕ ಲೇಖಕಿಂ-ಯರ ಸಮ್ಮೇಳನದಲ್ಲಿ, "ಭಾಷೆ: ಸಾಧ್ಯತೆ ಮತ್ತು ಸವಾಲುಗಳು" ಕುರಿತ ಗೋಷ್ಠಿಯಲ್ಲಿ ಆಶಯ ಮಾತುಗಳನ್ನು ಆಡಿದರು.

ನಾನು ಸಾಹಿತಿ ಅಲ್ಲ. ಸಾಹಿತ್ಯದ ಓದುಗ ಅಷ್ಟೆ. ನಾನು ಒಬ್ಬ ಪತ್ರಕರ್ತನಾಗಿ ತಿಳಿದಿದ್ದನ್ನು, ಗ್ರಹಿಸಿದ್ದನ್ನು ಮಾತ್ರ ನಿಮ್ಮ ಜೊತೆ ಹಂಚಿಕೊಳ್ಳುತ್ತೇನೆ. ನನ್ನ ಗ್ರಹಿಕೆಯನ್ನು ವಿಸ್ತ-ರಿಸಿಕೊಳ್ಳುವುದಕ್ಕೂ, ತಿದ್ದಿಕೊಳ್ಳುವುದಕ್ಕೂ ಈ ಒಂದು ಗೋಷ್ಠಿ ನನಗೆ ಉಪಯುಕ್ತ ಆಗುತ್ತದೆ ಎಂದು ನಂಬಿಕೊಂಡಿದ್ದೇನೆ.

ಅಮ್ಮ, ಅಕ್ಕ, ಪತ್ನಿ, ಅಜ್ಜಿ ಪದಗಳಿಲ್ಲದ ಬಯ್ಗುಳಗಳೇ ಇಲ್ಲದ ದ್ವೇಷದ ಭಾಷೆ ಒಂದು ಕಡೆಗಿದೆ. ಹೆಣ್ಣನ್ನು ದೇವತೆ, ಗೋಮಾತೆ ಎಂದು ಕರೆಯುತ್ತಲೇ ಪ್ರೀತಿಯ ಮಾತಿನಿಂದಲೇ ಆಕೆಯ ತುಟಿಗಳನ್ನು ಹೊಲಿಯುವ ಭಾಷೆಯೂ ಮತ್ತೊಂದು ಕಡೆಗಿದೆ. ಈ ಎರಡೂ ಸಂಚನ್ನು ದಾಟುವ ಸವಾಲು ನಮ್ಮ ಮುಂದಿದೆ. ಈ ದಿಕ್ಕಿನಲ್ಲಿ ಗೋಷ್ಠಿ ಬೆಳಕು ಚೆಲ್ಲಬಹುದು ಎಂದು ನಿರೀಕ್ಷಿಸುತ್ತೇನೆ.

ಒಂಬತ್ತು ತಿಂಗಳ ಬಾಹ್ಯಾಕಾಶ ಗರ್ಭದಿಂದ ಭೂಮಿಗೆ ಸೇಫ್ ಡೆಲಿವರಿ ಆಗಿರುವ ಸುನಿತಾ ವಿಲಿಯಮ್ಸ್ ಒಂದು ಮಾತು ಹೇಳಿದ್ದಾರೆ. "ನಾವು ಮೇಲಕ್ಕೆ ಮೇಲಕ್ಕೆ ಹೋದಷ್ಟೂ ಮನುಷ್ಯ ನಿರ್ಮಿತ ದೇಶದ ಗಡಿಗಳು ಕಾಣೆ ಆಗುತ್ತವೆ. ಕೆಳಕ್ಕೆ ಇಳಿದಾಗಲಷ್ಟೆ ಈ ಗಡಿಗಳೆಲ್ಲಾ ಕಾಣುತ್ತವೆ" ಎಂದಿದ್ದಾರೆ. ಒಂದು ಕಡೆ ಬಾಹ್ಯಾಕಾಶದಲ್ಲಿ ಬದುಕು ನಡೆಸಿ ಬಂದ ಸುನಿತಾ ವಿಲಿಯಮ್ಸ್ ಇದ್ದರೆ. ಮತ್ತೊಂದು ಕಡೆ ಕುಂಬ ಮೇಳದ ನದಿಯಲ್ಲಿ ಮುಳುಗೆದ್ದ ಸಮಾಜ ಇದೆ. ಇದು ಮಹಿಳಾ ಸಮಾಜದ ಮುಂದೆ ಇರುವ ಸಾಧ್ಯತೆ ಮತ್ತು ಸವಾಲು ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ.

ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳಲ್ಲಿ ಇತ್ತೀಚೆಗೆ ಮೂರು ರೀತಿಯ ಘಟನೆಗಳು ಪತ್ರಿಕೆಗಳಲ್ಲಿ ಹೆಚ್ಚೆಚ್ಚು ವರದಿ ಆಗುತ್ತಿವೆ. ಅವುಗಳಲ್ಲಿ...

1.ಜಾತಿ ಕಾರಣಕ್ಕೆ ಪೋಷಕರಿಂದಲೇ ನಡೆಯುತ್ತಿರುವ ಮರ್ಯಾದೆಗೇಡು ಹತ್ಯೆಗಳು.

2.ಜಾತಿ-ಧರ್ಮ ಮೀರಿ ಪ್ರೀತಿಯ ಅಂಗಳದಲ್ಲಿ ಒಂದಾದ ಲಿವಿಂಗ್ ರಿಲೇಷನ್ ಶಿಪ್ನಲ್ಲಿ ನಡೆಯುತ್ತಿರುವ ಕೊಲೆಗಳು.

3.ಬಾಲಕಿಯರಿಂದ-ವೃದ್ದೆಯರ ಮೇಲೂ ನಡೆಯುತ್ತಿರುವ ಸಾಮೂಹಿಕ ಅತ್ಯಾಚಾರಗಳು.

ನಮ್ಮದು ಕೇವಲ ಅಸಮಾನತೆ ಇರುವ ಸಮಾಜ ಮಾತ್ರವಲ್ಲ. ಜಾತಿ ವಿಷಮಾನತೆ ಆಚರಿಸುವ ಸಮಾಜ ಕೂಡ ಆಗಿದೆ ಎಂದರು.

ಮರ್ಯಾದೆಗೇಡು ಹತ್ಯೆಗಳಲ್ಲಿ ದಲಿತ, ಅಲ್ಪಸಂಖ್ಯಾತ, ಹಿಂದುಳಿದ ಜಾತಿ ಸಮುದಾಯಗಳ ಹೆಣ್ಣುಮಕ್ಕಳೇ ಹೆಚ್ಚಾಗಿದ್ದರೆ, ಜಾತಿ-ಧರ್ಮದ ಮಿತಿಯನ್ನು ದಾಟಿ ಲಿವಿಂಗ್ ರಿಲೇಷನ್ಶಿಪ್ನಲ್ಲಿದ್ದು ಆಗುತ್ತಿರುವ ಕೊಲೆಗಳಲ್ಲಿ ಎಲ್ಲಾ ಜಾತಿ, ವರ್ಗದ ಹೆಣ್ಣುಮಕ್ಕಳು ಇದ್ದಾರೆ ಎನ್ನುವುದನ್ನು ನಾನು ಗಮನಿಸಿದ್ದೇನೆ ಎಂದು ವಿಶ್ಲೇಷಿಸಿದರು.

ಹಾಗೆಯೇ ಇತ್ತೀಚೆಗೆ ಅತ್ಯಾಚಾರಗಳಲ್ಲಿ ಸಾಮೂಹಿಕ ಅತ್ಯಾಚಾರಗಳ ಸುದ್ದಿ ಹೆಚ್ಚೆಚ್ಚು ಮಾಧ್ಯಮಗಳಲ್ಲಿ ಕಾಣಿಸುತ್ತಿವೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಇಂಥಾ ಘಟನೆಗಳನ್ನು ವರದಿ ಮಾಡುವಾಗ ಬಳಕೆ ಆಗುವ ಭಾಷೆ ಎಷ್ಟು ಅಪಾಯಕಾ-ರಿಯಾಗಿರುತ್ತದೆ ಎನ್ನುವುದು.

ಒಂಟಿ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ, ರಾತ್ರಿ ಹನ್ನೊಂದು ಗಂಟೆಗೆ ಒಬ್ಬಳೇ ಹೋಗುತ್ತಿದ್ದ ಯುವತಿ ಮೇಲೆ ಅತ್ಯಾಚಾರ, ಪಾರ್ಕ್ನಲ್ಲಿ ವೃದ್ದೆಯ ಮೇಲೆ ಸಾಮೂಹಿಕ ಅತ್ಯಾಚಾರ, ಅಂಗಡಿಗೆ ಚಾಕೊಲೇಟ್ ತರಲು ಹೋಗಿದ್ದ ಬಾಲಕಿಯ ಮೇಲೆ ಅತ್ಯಾಚಾರ, ದೇವಸ್ಥಾನಕ್ಕೆ ಹೂ ತೆಗೆದುಕೊಂಡು ಹೋಗಿದ್ದ ಬಾಲಕಿ ಮೇಲೆ ಅತ್ಯಾಚಾರ. ಹೀಗೆ ಒಂ-ಟಿಯಾಗಿದ್ದ, ರಾತ್ರಿ ವೇಳೆ, ಪಾರ್ಕ್ನಲ್ಲಿ ಎನ್ನುವ ಪದಗಳೇ ಮೊದಲು ಬಳಕೆ ಆಗುತ್ತವೆ. ಆರೋಪಿಗಳ ಹೆಸರು ಸುದ್ದಿಯ ಕೊನೆಯಲ್ಲಿ ಇರುತ್ತವೆ.

ಅಂದರೆ ಇಲ್ಲಿ ಅತ್ಯಾಚಾರದ ಭೀಕರತೆಗಿಂತ ದೌರ್ಜನ್ಯಕ್ಕೆ ಒಳಗಾದವರು ಒಂಟಿಯಾಗಿದ್ದರು, ರಾತ್ರಿ ಹೊತ್ತು ಒಬ್ಬರೇ ಹೋಗುತ್ತಿದ್ದರು, ಪಾರ್ಕ್ನಲ್ಲಿ ಒಬ್ಬರೇ ವಾಕ್ ಮಾಡುತ್ತಿದ್ದರು, ಅವರ ಉಡುಪು ಪ್ರಚೋದನಕಾರಿಯಾಗಿ-ತ್ತು ಎನ್ನುವ ಭಾಷೆಯೇ ಮೊದಲಿಗೆ ಬಳಕೆ ಆಗುತ್ತದೆ.

ಆ ಮೂಲಕ ಮಹಿಳೆ ಒಬ್ಬೊಬ್ಬರೇ ಓಡಾಡಬಾರದು ಎನ್ನುವ ಗಂಡಾಳಿಕೆಯ ನಿರ್ಬಂಧ ಮತ್ತು ಮನಸ್ಥಿತಿ ಇಲ್ಲಿ ವ್ಯಕ್ತ ಆಗುತ್ತದೆ. ಹಾಗೆಯೇ ಸದನಗಳಲ್ಲಿ ಮಹಿಳಾ ಸದಸ್ಯರ ಬಗ್ಗೆ ಬಳಕೆ ಆಗುವ ಭಾಷೆ, ಈ ಬಗ್ಗೆ ಮಾಧ್ಯಮಗಳಲ್ಲಿ ನಡೆಯುವ ಚರ್ಚೆಯಲ್ಲಿ ಬಳಕೆ ಆಗುವ ಭಾಷೆ, ನ್ಯಾಯಾಲಯಗಳಲ್ಲಿ ಅತ್ಯಾಚಾರ ಪ್ರಕರಣಗಳ ವಿಚಾರಣೆ ವೇಳೆ ಬಳಕೆ ಆಗುವ ಅಸೂಕ್ಷ್ಮ ಮಾತುಗಳನ್ನೆಲ್ಲಾ ನಾನು ಪತ್ರಕರ್ತ ಆಗಿ ನಾನು ಗಮನಿಸಿದ್ದೇನೆ.

ನೀವೆಲ್ಲರೂ ಈ ಗಂಡಾಳಿಕೆಯ ಭಾಷೆಗೆ ಪ್ರತೀ ಕ್ಷಣ ಸಾಕ್ಷಿ ಆಗುತ್ತಲೇ ಇರುತ್ತೀರಿ.

ಭೂಮಿಯ ಅರ್ಧಭಾಗದಷ್ಟಿರುವ ಮಹಿಳೆಯರ ಹೋರಾಟ, ಚಳವಳಿ, ಪ್ರತಿರೋಧಗಳು ಆಕಾಶದ ಅರ್ಧಭಾಗವನ್ನು ಧಕ್ಕಿಸಿಕೊಳ್ಳುವ ದಿಕ್ಕಿನಲ್ಲಿ ರಭಸವಾಗಿ ನಡೆಯುತ್ತಲೇ ಇವೆ.

ಈ ಚಳವಳಿಗಳ ಜೊತೆಗೆ ಪುರುಷ ಜಗತ್ತು ಸಹೃದಯತೆಯಿಂದ ಸೇರಿಕೊಂಡಾಗ, "ಆನಂದಮಯ ಈ ಜಗ ಹೃದಯ" ಎನ್ನುವ ಕುವೆಂಪು ಅವರ ಸಾಲಿನ ಬದಲಾವಣೆಗಳಿಗೆ ಕಾರಣ ಆಗಬಹುದು.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಮನುಷ್ಯಕುಲಕ್ಕೆ ಸಂಕಟ ಬಂದಾಗ ಸಂಕಟದಿಂದ ಪಾರು ಮಾಡುವ ಶಕ್ತಿ ಇರುವುದು ಮಹಿಳಾ ಕುಲಕ್ಕೆ ಮಾತ್ರ. ಏಕೆಂದರೆ ಮಹಿಳೆ ಅಧ್ಯಕ್ಷೆ, ಪ್ರಧಾನಿ ಆಗಿರುವ ದೇಶಗಳು ಯುದ್ದಗಳಿಗಾಗಿ ಹಾತೊರೆಯುವುದಿಲ್ಲ.

ಕೋವಿಡ್ ನಂತಹ ಭೀಕರ ಪರಿಸ್ಥಿತಿಯನ್ನು ಅತ್ಯಂತ ಆರೋಗ್ಯಕರವಾಗಿ, ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ನಿರ್ವಹಿಸಿದ್ದು ಮಹಿಳೆಯರೇ ಅಧ್ಯಕ್ಷೆಯರಾಗಿದ್ದ ದೇಶಗಳು ಮಾತ್ರ. ನಮ್ಮ ದೇಶದ ಪ್ರಥಮ ಮಹಿಳೆ ದ್ರೌಪಧಿ ಮರ್ಮು ಅವರನ್ನು ರಾಷ್ಟ್ರ?ಪತಿ? ಅಂತಲೇ ಕರೆಯಬೇಕು. ಇದಕ್ಕೆ ಪರ್ಯಾಯ ಪದ ಇಲ್ಲ. ರೈತ ಎನ್ನುವ ಪದ ಇದೆ. ರೈತಿ ಎನ್ನುವ ಪದ ಇಲ್ಲ.

ಹೆಣ್ಣಿನ ಕುರಿತಾದ ಸಮಾಜದ ಭಾಷೆಯನ್ನು ಮತ್ತು ಇದನ್ನು ಮೀರಲು ನಡೆಯುತ್ತಿರುವ ಪ್ರಯತ್ನಗಳನ್ನು ಕೇವಲ ಒಬ್ಬ ಪತ್ರಕರ್ತನಾಗಿ ಇಲ್ಲಿ ನಾನು ಉಲ್ಲೇಖಿಸಿದ್ದೇನೆ.

ಗೋಷ್ಠಿಯ ಅಧ್ಯಕ್ಷತೆ ವಹಿಸಿರುವ ಡಾ.ಆಶಾದೇವಿ ಅವರ ನಲವತ್ತು ವರ್ಷಗಳ ಸಾಹಿತ್ಯ ಕೃಷಿಯ ಆತ್ಮವೇ "ಹೆಣ್ಣು-ದೇಹ" ಆಗಿದೆ. ಈ ಗೋಷ್ಠಿಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಲಿರುವ ಮೂವರೂ ವಿಷಯ ತಜ್ಞರಾಗಿದ್ದಾರೆ. ಇವರೆಲ್ಲರೂ, ನೀವೆಲ್ಲರೂ ನಿಮ್ಮ ನಿಮ್ಮ ಗ್ರಹಿಕೆ ಮತ್ತು ಅನುಭವಗಳ ಮೂಲಕ ಗೋಷ್ಠಿಯನ್ನು ಅರ್ಥಪೂರ್ಣಗೊಳಿಸುತ್ತೀರಿ ಎನ್ನುವ ಭರವಸೆ ಇದೆ ಎಂದರು.

ಡಾ.ಎಂ.ಎಸ್.ಆಸಾದೇವಿ ಅಧ್ಯಕ್ಷತೆ ವಹಿಸಿದ್ದ ಗೋಷ್ಠಿಯ ಲ್ಲಿ ಡಾ.ಸುರೇಶ್ ನಾಗಲಮಡಿಕೆ, ಪ್ರೀತಿ ನಾಗರಾಜ್, ವಸುಧೇಂದ್ರ ಅವರು ವಿಷಯ ಮಂಡನೆ ಮಾಡಿದರು.

## ವಿದ್ಯುತ್ ಶಾಕ್‌ದಿಂದ ಮೃತಪಟ್ಟ ವ್ಯಕ್ತಿಯ ಮನೆಗೆ ಮಹೇಶ ಹೊಸಗೌಡ್ರ ಭೇಟಿ; ಸಾಂತ್ವನ, ಆರ್ಥಿಕ ಸಹಾಯ



**ಬಾದಾಮಿ :** ಪಟ್ಟಣದ ಹೊರವಲಯದ ಜಯನಗರದಲ್ಲಿ ಗುರುವಾರ ಕರೆಂಟ್ ಶಾಕ್ ನಿಂದ ಮೃತಪಟ್ಟ ಸೊಹೈಲ್ ಮಕ್ತುಮ್ ಸಾಬ್ ಅಸೂಟಿ ಇವರ ಮನೆಗೆ ಯುವ ಮುಖಂಡ, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಹೊಸಗೌಡ್ರ ಇವರು ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಮೃತನ ಕುಟುಂಬಕ್ಕೆ ತಮ್ಮ ವಯಕ್ತಿಕವಾಗಿ ರೂ.10ಸಾವಿರ ಹಣವನ್ನು ಕೊಟ್ಟು, ಮಾನವೀಯತೆ ಮೆರೆದರು. ಈ ಸಂದರ್ಭದಲ್ಲಿ ನಗರದ ಮಹಮ್ಮದ ಉಮರ ಮೋಮಿನ್, ರಾಜಸಾಬ ಬೆಘಾರಿ, ಅಲ್ಲಾಭಕ್ಷಿ ಕುಂಡೆನಾಯಕ್, ನೂರ್ ನದಾಫ್, ಸಿರಾಜ್ ಅಡ್ವಾನಿ, ಇಮ್ರಾನ್ ಮೋಮಿನ, ಶಪೀಕ ಜಲಗೇರಿ, ರಾಜಸಾಹೇಬ ಮತ್ತಿಕಟ್ಟಿ ಸೇರಿದಂತೆ ಅಲ್ಪಸಂಖ್ಯಾತರ ಸಮಾಜದ ಗುರುಹಿರಿಯರು ಉಪಸ್ಥಿತರಿದ್ದರು.

## ಎಸ್‌ಎಸ್‌ಎಲ್‌ಸಿ ಪರೀಕ್ಷಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ

**ಬಾದಾಮಿ :** ತಾಲೂಕಿನ ಕಿತ್ತಲಿ, ಹೆಬ್ಬಳ್ಳಿ, ಗೋವನಕೊಪ್ಪ, ಕಾತರಕಿ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಹೆಬ್ಬಳ್ಳಿ ಪರೀಕ್ಷಾ ಕೇಂದ್ರದಲ್ಲಿ 265 ವಿದ್ಯಾರ್ಥಿಗಳಿಗೆ ಮತ್ತು ಮುತ್ತಲಗೇರಿ, ಬೆಳವಲಕೊಪ್ಪ, ನೀಲಗುಂದ ಪ್ರೌಢಶಾಲೆಯ 145 ವಿದ್ಯಾರ್ಥಿಗಳಿಗೆ ದಿಂ.ಲಕ್ಷ್ಮಣ ಯಲ್ಲಪ್ಪ ಹಟ್ಟಿ ಶಿಕ್ಷಣ ಮತ್ತು ಸೇವಾ ಟ್ರಸ್ಟ್ ಬಾದಾಮಿ ಇವರ ವತಿಯಿಂದ ಟ್ರಸ್ಟ್‌ನ ಅಧ್ಯಕ್ಷ, ಕೆಪಿಸಿಸಿ ರಾಜ್ಯ ವಕ್ತಾರ ಮಹಾಂತೇಶ ಹಟ್ಟಿ ಇವರು ಮಕ್ಕಳಿಗೆ ಪೆನ್ನು, ಬಿಸ್ಕೀಟು, ಕುಡಿಯುವ ನೀರಿನ ಸೌಕರ್ಯಗಳನ್ನು ಒದಗಿಸಿದರು. ಈ ಸಂದರ್ಭದಲ್ಲಿ ಹೆಬ್ಬಳ್ಳಿ ಗ್ರಾ.ಪಂ.ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು,



ಎಸ್.ಡಿ.ಎಂ.ಸಿ.ಅಧ್ಯಕ್ಷ, ಉಪಾಧ್ಯಕ್ಷರು, ಗ್ರಾಮದ ಗುರುಹಿರಿಯರು, ಯುವಕರು ಹಾಜರಿದ್ದರು.

## ಕುರಿದೊಡ್ಡಿಗೆ ಪಿ.ಎಸ್.ಐ. ಭೇಟಿ

**ಬಾದಾಮಿ :** ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮಗಳ ಸುತ್ತಮುತ್ತಲಿನ ಕುರಿಗಾಹಿಗಳ ಕುರಿದಡ್ಡಿಗಳಿಗೆ ಪಿ.ಎಸ್.ಐ.ವಿಠ್ಠಲನಾಯಕ ಭೇಟಿ ನೀಡಿ ಕುರಿಗಾಹಿಗಳ ಆತ್ಮರಕ್ಷಣೆ ಮತ್ತು ಅವರ ಸಂರಕ್ಷಣೆ ಸಲುವಾಗಿ ವಿಶೇಷ ಬಂದೂಕು ತರಬೇತಿಯನ್ನು ಬಾಗಲಕೋಟ ಡಿಎಆರ್ ಘಟಕದಲ್ಲಿ ಮುಂದಿನ ತಿಂಗಳು ಎಪ್ರಿಲ್ 7 ರಿಂದ 13 ನೇ ತಾರೀಖಿನ ವರೆಗೆ ಇರುತ್ತದೆ ಹಾಗೆಯೇ ಪ್ರಮಾಣ ಪತ್ರವನ್ನು ಸಹ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು. ಎಸ್.ಪಿ.ಯವರ ಸೂಚನೆ ಮೇರೆಗೆ ರಾತ್ರಿ ಸಮಯದಲ್ಲಿ ಕುರಿದಡ್ಡಿಗಳ ಕಡೆಗೆ ಜಾಸ್ತಿ ಗಮನ ಹರಿಸಬೇಕು ಏನಾದರು ತೊಂದರೆ ಇದ್ದಲ್ಲಿ ಪೊಲೀಸ್ ಠಾಣೆಗೆ ತಿಳಿಸಬೇಕು ಹಾಗೆಯೇ ತುರ್ತು ಸೇವೆಯ 112 ನಂಬರಿಗೆ ಕರೆ ಮಾಡಲು ಮಾಹಿತಿ ತಿಳಿಸಿದರು.



## ನಿತ್ಯ ಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಳ್ಳಿ: ರಫೀ ಭಂಡಾರಿ




**ವಿಜಯಪುರ :** ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು.ದೈನಂದಿನ ದಿನ ಪತ್ರಿಕೆ ಓದುವ ಹಾಗೂ ಆಧುನಿಕ ತಂತ್ರಜ್ಞಾನವನ್ನು ಮತ್ತು ಸಮಾಜದಲ್ಲಿನ ಇತ್ತೀಚಿನ ಪ್ರವೃತ್ತಿಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಮುಂದಾಗಬೇಕು ಎಂದು ಹಿರಿಯ ಪತ್ರಕರ್ತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮತ್ತು ರಾಣಿ ಚನ್ನಮ್ಮ ವಿವಿ ಸಿಂಡಿಕೇಟ್ ಸದಸ್ಯ ರಫೀ ಭಂಡಾರಿ ಹೇಳಿದರು. ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದ 'ಐಕ್ಯೂಎಸಿ, ಮಹಾವಿದ್ಯಾಲಯದ ಕೆರಿಯರ್ ಗೈಡೆನ್ಸ್, ಪ್ಲೇಸ್ಮೆಂಟ್ ಸೆಲ್ ವಿಭಾಗದ ಮತ್ತು ಎಸ್ ಬಿ ವಿಸ್ಡಮ್ ಕರಿಯರ್ ಅಕಾಡೆಮಿಯ ಸಂಯುಕ್ತಾಶ್ರಯದಲ್ಲಿ ಬಿಎ,ಬಿಎಸ್ಸಿ, ಬಿಸಿಎ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮ ಪರೀಕ್ಷೆಗಳ 15 ದಿನಗಳ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮೊಬೈಲ್ ಗೀಳಿಗೆ ತುತ್ತಾಗಿ ದುಶ್ಚಟಕ್ಕೆ ದಾಸರಾಗುತ್ತಿದ್ದಾರೆ. ಮೊಬೈಲ್ ಶೈಕ್ಷಣಿಕ ಚಟುವಟಿಕೆಗಳಿಗೆ ಬಳಸಿಕೊಂಡು ತಮ್ಮ ಭವ್ಯವಾದ ಭವಿಷ್ಯವನ್ನು ನಿರ್ಮಿಸಿಕೊಳ್ಳಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ನಿರಂತರವಾಗಿ ದಿನಪತ್ರಿಕೆಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ದೈನಂದಿನಿ ಆಗುಹೋಗಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವಿರಬೇಕು. ನಿಜವಾದ ಬಡವರು ಓದದವರು. ಯಾರು ನಿರಂತರವಾಗಿ ಓದಿ ಉತ್ತಮ ಜ್ಞಾನವನ್ನು ಸಂಪಾದಿಸುತ್ತಾರಂ.? ಉತ್ತಮ ಜೀವನ ನಡೆಸುತ್ತಾರೋ ಅವರೇ ನಿಜವಾದ ಶ್ರೀಮಂತರು. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಓದಿ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ಹೇಳಿದರು.

ನೀವು ಕಂಡಂತಹ ಕನಸು ಈಡೇರಿಸಿಕೊಳ್ಳಲು, ಸಾಧಿಸಲು ಇಂದಿನಿಂದಲೇ ದೃಡ ಮನಸ್ಸನ್ನು ಮಾಡಬೇಕು.ತಂದೆ ತಾಯಿಗಳು ನಿಮ್ಮ ಮೇಲೆ ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಂಡು ವಿದ್ಯಾರ್ಥಿಗಳು ಉತ್ತಮ ಜ್ಞಾನವನ್ನು ಸಂಪಾದಿಸುವಲ್ಲಿ ಮುಂದಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಗೋಲ್‌ಗುಂಬಜ್ ಸಿಪಿಐ ಮಲ್ಲಯ್ಯ ಮಠಪತಿ ಮಾತನಾಡಿ, ಜೀವನದಲ್ಲಿ ಪ್ರೇರಣೆಯಾಗಿಸಿಕೊಳ್ಳಬೇಕಾದರೆ ಮೊದಲು ನಿಮ್ಮ ಹೆತ್ತ ತಂದೆ ತಾಯಿಗಳನ್ನು ಮಾದರಿಯಾಗಿಸಿಕೊಳ್ಳಿ. ಸಾಧನೆ ಎಂದರೆ ಕೇವಲ ಓದು ಬರಹ ಮಾತ್ರ ಅಲ್ಲ. ಅದರ ಹೊರತಾಗಿಯೂ ನೀವು ಕಂಡಂತಹ ಯಾವುದೇ ಕ್ಷೇತ್ರದಲ್ಲಿ ಮಾಡುವ ಸಾಧನೆಯಾಗಿದೆ. ಓದಿನೊಂದಿಗೆ ಇನ್ನಿತರ ದಾರಿಗಳನ್ನು ಕಂಡುಕೊಂಡಿರಬೇಕು. ಜೀವನದಲ್ಲಿ ನಿಮ್ಮ ಸಾಧನೆಗೆ ನೀವೆ ಮಾರ್ಗಗಳನ್ನು ಕಂಡುಕೊಳ್ಳಬೇಕು.ಜೊತೆಗೆ ಓದಿನೊಂದಿಗೆ ಇತ್ತೀಚಿನ ಆಗುಹೋಗುಗಳ ಬಗ್ಗೆ ಅರಿವಿರಬೇಕು. ಸಾರ್ವಜನಿಕರೊಂದಿಗೆ ಬೆರೆತು ಸಮಾಜದಲ್ಲಿನ ದೈನಂದಿನ ಚಟುವಟಿಕೆಗಳ ಮಾಹಿತಿ ಪಡೆದುಕೊಂಡು ಸದೃಢರಾಗಬೇಕು. ನಮ್ಮ ಜೀವನದಲ್ಲಿ ಬಹಳಷ್ಟು ಅಡ್ಡ ದಾರಿಗಳು ಬರುವುದುಂಟು. ಅವುಗಳನ್ನು ಮೆಟ್ಟಿ ನಿಂತು ಛಲ ಬಿಡದೆ ಸಾಧನೆಗೆ ಮುಂದಾಗಬೇಕು. ತಮ್ಮ ಜೀವನವನ್ನು ಇತರರೊಂದಿಗೆ ಹೋಲಿಕೆ ಬೇಡ. ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬಾಳಿ. ನಿಮ್ಮ ತಂದೆ ತಾಯಿಗಳಿಗೆ ಈ ಸಮಾಜಕ್ಕೆ, ನಿಮ್ಮ ಊರಿಗೆ ,ನಿಮ್ಮ ಜಿಲ್ಲೆಯ ಹೆಸರು ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಸ್‌ಬಿ ವಿಸ್ಡಮ್ ಕರಿಯರ್ ಅಕಾಡೆಮಿಯ ಸಂಸ್ಥಾಪಕ ಶರಣಯ್ಯ ಭಂಡಾರಿಮಠ, ಆಡಳಿತಾಧಿಕಾರಿ ಭಾಗೇಶ ಮುರಡಿ ಮತ್ತು ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಆರ್.ಎಂ.ಮಿರ್ದೆ ಮಾತನಾಡಿದರು.

ಈ ವೇಳೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ತಮ್ಮ 15 ದಿನಗಳ ವರೆಗಿನ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಅನುಭವವನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಉಪಪ್ರಾಚಾರ್ಯ ಡಾ.ಅನೀಲ ಬಿ. ನಾಯಕ, ಐಕ್ಯೂಎಸಿ ನಿರ್ದೇಶಕ ಡಾ.ಪಿ.ಎಸ್ ಪಾಟೀಲ, ನ್ಯಾಕ್ ಸಂಯೋಜಕ ಡಾ.ಕೆ.ಮಹೇಶಕುಮಾರ, ಡಾ.ಶ್ರೀನಿವಾಸ ದೊಡ್ಡಮನಿ ಹಾಗೂ ಮಹಾವಿದ್ಯಾಲಯದ ಕೆರಿಯರ್‌ಗೈಡೆನ್ಸ್ ಮತ್ತು ಪ್ಲೇಸ್ಮೆಂಟ್ ಸೆಲ್ ವಿಭಾಗದ ಸಂಯೋಜಕರಾದ ಡಾ.ಅಮಿತ್ ತೇರದಾಳೆ, ಪ್ರೊ. ಎಂ ಎಸ್ ಜೇವೂರ, ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಡಾ.ಪಿ.ಎಸ್ ಪಾಟೀಲ ಸ್ವಾಗತಿಸಿದರು, ಡಾ.ಉಷಾದೇವಿ ಹಿರೇಮಠ ನಿರೂಪಿಸಿದರು.

## ಗುಲಾಬಿ ಹೂವು ನೀಡಿ ಆರತಿ ಬೆಳಗಿ ಪರೀಕ್ಷೆ ಬರೆಯಲು ಸ್ವಾಗತ



**ವಿಜಯಪುರ:** ಜಿಲ್ಲೆಯ ತಿಕೋಟಾ ತಾಲ್ಲೂಕಿನ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜರುಗಿದ ಮೊದಲ ದಿನದ ಎಸ್ಸೆಸ್ಸೆಲ್ಸಿ ಪರೀಕ್ಷೆಯು ಸುಸೂತ್ರವಾಗಿ ನಡೆದಿದ್ದು, ಹಲವು ಪರೀಕ್ಷಾ ಕೇಂದ್ರಗಳಲ್ಲಿ ಮಕ್ಕಳಿಗೆ ಭಯಮುಕ್ತ ಪರೀಕ್ಷೆ ಎದುರಿಸಲು ಪರೀಕ್ಷಾ ಕೇಂದ್ರದ ವತಿಯಿಂದ ವಿಭಿನ್ನ ರೀತಿಯಲ್ಲಿ ಸ್ವಾಗತವನ್ನು ಕೋರಲಾಯಿತು.

ತಿಕೋಟಾ ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಮಾಣಿಕೇಶ್ವರಿ ಪ್ರೌಢ ಶಾಲೆಯಲ್ಲಿ ಶುಕ್ರವಾರ ಪ್ರಥಮ ಭಾಷೆ ಕನ್ನಡ ವಿಷಯ ದಿನದಂದು ವಿಧ್ಯಾರ್ಥಿಗಳಿಗೆ ಆರತಿ ಬೆಳಗಿ ಗುಲಾಬಿ ಹೂವು ನೀಡಿ ಸ್ವಾಗತಿಸಲಾಯಿತು.

ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ ಎಸ್. ಎಂ. ಅವಟಿ ಮಾತನಾಡಿ, ವಿಧ್ಯಾರ್ಥಿಗಳು ಭಯಮುಕ್ತವಾಗಿ ಪರೀಕ್ಷೆ ಬರೆಯಬೇಕು. ಪರೀಕ್ಷಾ ಕೊಠಡಿಯಲ್ಲಿ ನಕಲು ಮಾಡಲು ಅವಕಾಶವಿಲ್ಲ. ಇಡೀ ಪರೀಕ್ಷಾ ಕೇಂದ್ರ ಹಾಗೂ ಕೊಠಡಿಗಳು ಸಿಸಿ ಕ್ಯಾಮರಾ ನಿಗಾದಲ್ಲಿರುವದು. ಶಾಂತತೆಯಿಂದ ಪ್ರಶ್ನೆ ಪತ್ರಿಕೆಯನ್ನು ಅರ್ಥೈಸಿಕೊಂಡು ಉತ್ತರಗಳನ್ನು ಬರೆದು ನಿಮ್ಮ ಭವಿಷ್ಯ ಉಜ್ವಲಗೊಳಿಸಿಕೊಳ್ಳಬೇಕು ಎಂದು ವಿಧ್ಯಾರ್ಥಿಗಳಿಗೆ ದೈರ್ಯ ತುಂಬಿದರು.

ಪ್ರತಿ ವಿಧ್ಯಾರ್ಥಿಗಳಿಗೆ ತಪಾಸಣೆ ಮಾಡಿ ಪರೀಕ್ಷಾ ಕೇಂದ್ರದೊಳಗೆ ಬಿಡಲಾಯಿತು. ಪರೀಕ್ಷಾ ಕೇಂದ್ರದ ಹೊರಗೆ ಸಾರ್ವಜನಿಕರಿಂದ ಯಾವುದೇ ತೊಂದರೆಯಾಗದಂತೆ ಸುಸೂತ್ರವಾಗಿ ಮೊದಲ ದಿನದ ಕನ್ನಡ ಭಾಷಾ ಪರೀಕ್ಷೆ ಯಶಸ್ವಿಯಾಗಿ ಮುಕ್ತಾಯವಾಯಿತು.

ಈ ಸಂದರ್ಭದಲ್ಲಿ ಉಪ ಅಧೀಕ್ಷಕ ಬಿ.ಎಂ.ಬಡಿಗೇರ, ಕಸ್ಟೋಡಿಯನ್ ಸಿ.ಎಲ್.ಪಾಟೀಲ್, ಸಂಸ್ಥೆಯ ಮುಖ್ಯೋಪಾಧ್ಯಾಯ ಚಿದಾನಂದ ಅವಟಿ, ಎಂ.ಡಿ. ಪಡಂದಾರ, ಬಿ.ಸಿ.ನಾವಿ, ಆನಂದ ಝುಂಡೆ, ಗಜಾನಂದ ಜುಂಜರವಾಡ, ಎಸ್. ಎನ್.ಬಾಗಲಕೋಟ ಇತರರಿದ್ದರು.

# ಹು-ಧಾ.ಮ.ಪಾ. 1512.67 ಕೋ.ರೂ. ಗಾತ್ರದ ಬಜೆಟ್ ಮಂಡನೆ

**ಹುಬ್ಬಳ್ಳಿ :** ಜಿಐಎಸ್ ಸರ್ವೆ ಕೈಕೊಳ್ಳುವ ಮೂಲಕ ಪಾಲಿಕೆಯ ಆಸ್ತಿ ತೆರಿಗೆಯನ್ನು ಹಾಗೂಇತರೆಆಂತರಿಕಸಂಪನ್ಮೂಲಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಿಸುವುದು, 2025-26ನೇ ಸಾಲಿನಲ್ಲಿ 247 ನಿರಂತರ ಕುಡಿಯುವ ನೀರಿನ ಸರಬರಾಜು ಕಾಮಗಾರಿಯನ್ನು ಪೂರ್ಣಗೊಳಿಸಿ ಎಲ್ಲ ವಾರ್ಡಗಳಿಗೂ 247 ನಿರಂತರ ಕುಡಿಯುವ ನೀರನ್ನು ಪೂರೈಸುವುದು, ಪ್ರತಿ ಮನೆಯಿಂದ ಶೇ.100 ರಷ್ಟು ವಿಂಗಡಿಸಿದ ಕಸ ಸಂಗ್ರಹಿಸಿ ಶೇ. 100 ರಷ್ಟು ಸಂಸ್ಕರಣೆ ಕೈಕೊಂಡು 'ಕಸಮುಕ್ತ ನಗರ' ವನ್ನಾಗಿಸುವುದು ಇತ್ಯಾದಿ ಮಹತ್ವದ ಗುರಿಯ ಅಂಶಗಳೊಡನೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 2025-26ನೇ ಸಾಲಿನ 1512.67 ಕೋಟಿ ರೂ. ಗಾತ್ರದ ಬಜೆಟ್ ಅನ್ನು ಇಂದು ನಡೆದ ಸಭೆಯಲ್ಲಿ ಹು-ಧಾ ಮಹಾನಗರ ಪಾಲಿಕೆ ತೆರಿಗೆ ನಿರ್ಧರಣೆ ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಚಂದ್ರಶೇಖರ ಮನಗುಂಡಿ ಮಂಡಿಸಿದರು.



ಪಿ.ಪಿ.ಪಿ. ಮಾದರಿಯಲ್ಲಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಮೂಲಕ ನಗರ ಸೌಂದರ್ಯ ಹೆಚ್ಚಿಸಲು ಉದ್ದೇಶಿಸಲಾಗಿದೆಯಲ್ಲದೇ ಹು-ಧಾ. ಮ ಪಾಲಿಕೆ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಪೌರ ಕಾರ್ಮಿಕರಿಗಾಗಿ ಮಂಟೂರು ರಸ್ತೆಯಲ್ಲಿ ಸುಮಾರು320ಮನೆಗಳಜಿ+3ಮಾದರಿಯಲ್ಲಿ ಗೃಹ ನಿರ್ಮಾಣ ಮಾಡುತ್ತಿದ್ದು, 26 ಕೋಟಿ ರೂ.ಗಳ ಈ ಯೋಜನೆಯಡಿ 244 ಮನೆ ಪೂರ್ಣಗೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ಎಲ್ಲ ಮನೆ ಪೂರ್ಣಗೊಳಿಸಿ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲು ನಿರ್ಧರಿಸಲಾಗಿದೆ. ಬಾಕಿ ಉಳಿದ ಕಾಮಗಾರಿಗಳ ಪೂರ್ಣಗೊಳಿಸಲು ಪ್ರಸ್ತುತ ಬಜೆಟ್‌ನಲ್ಲಿ 5 ಕೋಟಿ ರೂ. ಅನುದಾನ ಕಾಯ್ದಿರಿಸಲಾಗಿದೆ.

ರಾಜ್ಯ ಹಣಕಾಸು ಆಯೋಗದ ಎಸ್. ಎಫ್.ಸಿ. ಬಂಡವಾಳ ಸೃಜನೆಯಡಿ 2.8 ಕೋಟಿಗಳಷ್ಟು ಎಸ್.ಎಫ್.ಸಿ., ಎಸ್.ಸಿ.ಎಸ್.ಪಿ ಯಡಿ ಶೇ. 60 ರಷ್ಟು ಕಾಮಗಾರಿಗೆ 190.8 ಲಕ್ಷಗಳಷ್ಟು ಹಾಗೂ ಎಸ್.ಎಫ್.ಸಿ-ಟಿ.ಎಸ್.ಪಿ. ಯಡಿ ಶೇ. 60 ರ ಬಂಡವಾಳ ಸೃಜನೆಗೆ ಸುಮಾರು 78.6 ಲಕ್ಷ ರೂ.ಗಳಷ್ಟು ಅನುದಾನವನ್ನು ಕಾಯ್ದಿರಿಸಿದ್ದು, ಒಟ್ಟು 4.77 ಕೋಟಿಗಳಷ್ಟು ಅನುದಾನವನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಡಲಾಗಿದೆ.

ಪಾಲಿಕೆಯಲ್ಲಿ ವಿಲೀನಗೊಂಡ ಹಳ್ಳಿಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಕೊಳ್ಳುವ ಸಂಬಂಧ ಪ್ರಸ್ತುತ ವರ್ಷ ಸುಮಾರು 10 ಕೋಟಿ ರೂ. ಅನುದಾನ ಮೀಸಲಿರಿಸಿದ್ದು, ಪಾಲಿಕೆಯಲ್ಲಿ ವಿಲೀನಗೊಂಡಿರುವ ಎಲ್ಲ ಹಳ್ಳಿಗಳ ಅಭಿವೃದ್ಧಿ ಪೂರಕ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

ಪಾಲಿಕೆಯ ಒಟ್ಟು 868.23 ಕೋಟಿ ರೂ.ಗಳಷ್ಟು ರಾಜಸ್ವ ಸ್ವೀಕೃತಿ, 575.63 ಕೋಟಿಗಳಷ್ಟು ಬಂಡವಾಳ ಸ್ವೀಕೃತಿ, 68.81 ಕೋಟಿಗಳಷ್ಟು ಅಸಾಮಾನ್ಯ ಸ್ವೀಕೃತಿಗಳನ್ನು ಅಂದಾಜಿಸುತ್ತಿದ್ದು, ಎಲ್ಲ ಯೋಜನೆಗಳನ್ನು ಒಳಗೊಂಡಂತೆ ಒಟ್ಟು 984.29 ಕೋಟಿಗಳಷ್ಟು ಬಂಡವಾಳ ವೆಚ್ಚಕ್ಕಾಗಿ ಕಾಯ್ದಿರಿಸಿದೆ. ಇವುಗಳಿಂದ ಪ್ರಸಕ್ತ ಸಾಲಿನ ಆಯವ್ಯಯ ಗಾತ್ರ ಒಟ್ಟಾರೆ 1512.67 ಕೋಟಿಗಳಷ್ಟು ತಲುಪಿದೆ.

# ಪಿಡಿಓ, ಕಾಯಕಬಂಧು ಹಾಗೂ ನರೇಗಾ ಸಿಬ್ಬಂದಿಯ ಒಂದು ದಿನದ ತರಬೇತಿ ಕಾರ್ಯಾಗಾರ

**ನರಗುಂದ :** ಬರಗಾಲವಿದೆಯೆಂದು ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಕೆಲಸ ಸಿಗಲ್ಲ ಎಂಬ ಭಯಬೇಡ. ಎಪ್ರೀಲ್-1 ರಿಂದ ಉದ್ಯೋಗ ಖಾತ್ರಿ ಕೆಲಸ ಆರಂಭವಾಗುತ್ತಿದ್ದು, ಯೋಜನೆಯಡಿ ಅನೇಕ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಅವಕಾಶವಿದೆ. ಗ್ರಾಮೀಣ ಪ್ರದೇಶಗಳ ಕಡುಬಡವರಿಗೂ ಯೋಜನೆಯ ಸದೂಪಯೋಗ ದೊರಕುವಂತ್ತಾಗಿ ಕೆಲಸದ ಹಸುವಿರುವವರಿಗೆ ಕೆಲಸ ಕೊಡುವಂತೆ ಕಾಯಕಬಂಧುಗಳು ಕಾರ್ಯನಿರ್ವಹಿಸಬೇಕು ಅಂತ ನರಗುಂದ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಎಸ್. ಕೆ.ಇನಾಮದಾರ ಅಭಿಪ್ರಾಯಪಟ್ಟರು. ನಗರದ ತಾಲೂಕು ಪಂಚಾಯತಸಭಾಭವನದಲ್ಲಿನಡೆದಪಿಡಿಓ,ಕಾಯಕಬಂಧು ಹಾಗೂ ನರೇಗಾ ಸಿಬ್ಬಂದಿಯ ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಬರಗಾಲದತೀವ್ರತೆಯಿಂದಕೆಲಸಸಿಗದಿರುವಆತಂಕದಲ್ಲಿರುವ ಗ್ರಾಮೀಣ ಪ್ರದೇಶ ಕೂಲಿಕಾರರಿಗೆ ನೆರವಾಗಲೆಂದು ಎಪ್ರೀಲ್-1 ರಿಂದ ನರೇಗಾ ಯೋಜನೆಯಡಿ ಸಮುದಾಯ ಕಾಮಗಾರಿಗಳನ್ನು ಆರಂಭಿಸಲಾಗುತ್ತಿದೆ. ಇದ್ದೂರಲ್ಲೇ ನರೇಗಾ ಕೆಲಸ ಕೊಡುತ್ತಿರುವುದು ಗ್ರಾಮೀಣ ಪ್ರದೇಶದ ಜನರ ಗುಳೆ ತಪ್ಪಿಸುವ ಕೆಲಸವಾಗಿದೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ನರೇಗಾ ಯೋಜನೆ ಮಹತ್ವದ ಪಾತ್ರವಹಿಸಿದೆ. ಯೋಜನೆಯಡಿವಾರ್ಷಿಕವಾಗಿ100ದಿನಗಳವರೆಗೆಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಕೆಲಸ ಸಿಗುವಂತ್ತಾಗಬೇಕು. ಈ ಮೂಲಕಗ್ರಾಮೀಣಪ್ರದೇಶದಮೂಲಭೂತಸಮಸ್ಯೆಗಳನ್ನು ನಿವಾರಿಸಲು ನರೇಗಾ ವರದಾನವಾಗಲಿದೆ. ತಾಲೂಕಿನ ಎಲ್ಲ ಗ್ರಾಪಂಗಳಕಾಯಕಬಂಧುಗಳುನರೇಗಾಕೆಲಸಗಳಲ್ಲಿಹೆಚ್ಚಿನ ಸಂಖ್ಯೆಯಲ್ಲಿಕೂಲಿಕಾರರನ್ನುಸೇರಿಸುವಕೆಲಸಮಾಡಬೇಕು ಅಂತ ತರಬೇತಿಯಲ್ಲಿ ಭಾಗವಹಿಸಿದ್ದ ಕಾಯಕಬಂಧುಗಳಿಗೆ ಕಿವಿಮಾತು ಹೇಳಿದರು. ಬೇಸಿಗೆ ಅವಧಿಯ 60 ದಿನಗಳ ಕಾಲ ನರೇಗಾ ಯೋಜನೆಯಡಿ ಕೆಲಸ ಮಾಡಿದ್ರೆ ಕೂಲಿಕಾರರಿಗೆ 20940 ರೂಪಾಯಿ ಸಿಗುತ್ತದೆ. ಕೂಲಿಕಾರರು ನರೇಗಾ ಯೋಜನೆಯಿಂದ ಬರುವ ಈ ಹಣವನ್ನು ಮುಂಗಾರಿನ ಕೃಷಿ ಭಿತ್ತನೆಯ ಕಾರ್ಯಕ್ಕೆ ಸದೂಪಯೋಗಪಡಿಸಿಕೊಳ್ಳಲು ನೆರವಾಗಲಿದೆ ಎಂದು ಅಭಿಪ್ರಾಯಪಟ್ಟರು.



ಅಕ್ಷರ ದಾಸೋಹದ ಸಹಾಯಕ ನಿರ್ದೇಶಕರಾದ ಮಾರುತಿ ಅಸುಂಡಿ ಅವರು ತರಬೇತಿಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು, ನರೇಗಾ ಯೋಜನೆಯ ಕಾಮಗಾರಿಗಳಿಂದ ಶಾಲೆಯ ಮೂಲಸೌಕರ್ಯಗಳ ನಿರ್ಮಾಣಕ್ಕೆನೆರವಾಗಿದೆಅಂತಯೋಜನೆಯಕಾಮಗಾರಿಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ತರಬೇತಿಯಲ್ಲಿ ಅತಿಥಿಯಾಗಿ ಭಾಗವಹಿಸಿದ್ದ ನರೇಗಾ ಯೋಜನೆಯಸಹಾಯಕನಿರ್ದೇಶಕರುಸಂತೋಷಕುಮಾರ್ ಪಾಟೀಲ್ ಮಾತನಾಡಿ, ಕಾಯಕಬಂಧುಗಳು ಪ್ರತಿವರ್ಷ ಬದಲಾವಣೆಯಾಗುವ ನಿಯಮಾವಳಿಗೆ ಅನುಗುಣವಾಗಿ ನರೇಗಾ ಕೆಲಸ ನಿರ್ವಹಿಸಲು ತರಬೇತಿ ಅತ್ಯವಶ್ಯಕವಾಗಿದೆ. ನರೇಗಾ ಕೆಲಸದಲ್ಲಿ ಮಹಿಳೆಯರು ಸ್ವಯಂ ಪ್ರೇರಣೆಯಿಂದ ಭಾಗವಹಿಸುವಂತ್ತಾಗಬೇಕು. ಕಾಯಕಬಂಧುಗಳು ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರನ್ನು ಸಂಪರ್ಕಿಸಿ ನರೇಗಾ ಯೋಜನೆಯಲ್ಲಿ ಮಹಿಳಾ ಭಾಗವಹಿಸುವಿಕೆ ಪ್ರಮಾಣ ಹೆಚ್ಚಿಸಲು ಶ್ರಮವಹಿಸಬೇಕೆಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಮಾಹಿತಿ ಮತ್ತು ಶಿಕ್ಷಣ ಸಂಯೋಜಕ ಸುರೇಶ ಬಾಳಿಕಾಯಿ ಮಾತನಾಡಿ, ಕಾಯಕಬಂಧುಗಳು ಎಂದರೇ ಯಾರು? ಕಾಯಕಬಂಧುಗಳ ಪಾತ್ರ ಮತ್ತು ಜವಾಬ್ದಾರಿ ಕುರಿತು ತರಬೇತಿ ನೀಡಿದರು.

ಬೇಸಿಗೆ ಅವಧಿಯಲ್ಲಿ ರೈತರ ಹೊಲದಲ್ಲಿ ಯೋಜನೆಯಡಿ ನಿರ್ಮಿಸುವ ಕಂದಕಬಧುಗಳ ನಿರ್ಮಾಣ ಮತ್ತು ಅನುಷ್ಠಾನ ಕುರಿತು ತಾಂತ್ರಿಕ ಸಂಯೋಜಕ ಹನಮಂತ ಡಂಬಳ ವಿಷಯ ಮಂಡಿಸಿದರು. ಕೂಲಿಕಾರರ ಹಾಜರಾತಿ ನಿರ್ವಹಣೆ ಕುರಿತು ಎಂಐಎಸ್ ಸಂಯೋಜಕ ಮಹೇಶ ಚಿತ್ತವಾಡಗಿ ಅವರು ವಿಷಯ ಮಂಡಿಸಿದರು.

ತರಬೇತಿಕಾರ್ಯಾಗಾರವನ್ನುಸಸಿಗೆನೀರೂಣಿಸುವಮೂಲಕ ಎಸ್.ಕೆ.ಇನಾಮದಾರ, ಕಾರ್ಯನಿರ್ವಾಹಕ ಅಧಿಕಾರಿಗಳು, ಸಂತೋಷಕುಮಾರ್ ಪಾಟೀಲ್, ಸಹಾಯಕ ನಿರ್ದೇಶಕರು ಗ್ರಾಮೀಣ ಉದ್ಯೋಗ, ಮಾರುತಿ ಅಸುಂಡಿ ಸಹಾಯಕ ನಿರ್ದೇಶಕರು ಅಕ್ಷರ ದಾಸೋಹ ತಾಲೂಕು ಪಂಚಾಯತ ನರಗುಂದ ಅವರು ಜಂಟಿಯಾಗಿ ಉದ್ಘಾಟಿಸಿದರು.

# ಹುರಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಲಯದಲ್ಲಿ ರಕ್ತದಾನ ಶಿಬಿರ



**ಧಾರವಾಡ:** ವಿದ್ಯಾಭಿವೃದ್ಧಿ ಸಂಸ್ಥೆಯ ಸಂಸ್ಥಾಪಕರಾದ ರಾವಬಹದ್ದೂರ ಶ್ರೀ. ರುದ್ರಗೌಡ ಚನ್ನವೀರಗೌಡ ಅರಟಾಳ ಇವರ 175 ನೇ ಜನ್ಮದಿನದ ಅಂಗವಾಗಿ ಮತ್ತು ವಿಶ್ವ ಜಲದಿನದ ಅಂಗವಾಗಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಹುರಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಯದೊಂದಿಗೆ ಜಂಟಿಯಾಗಿ ಕರ್ನಾಟಕ ಕ್ಯಾನ್ಸರ ನಿವಾರಣಾ ಮತ್ತು ಸಂಶೋಧನಾ ಕೇಂದ್ರ ನವನಗರ, ಹುಬ್ಬಳ್ಳಿ ಮತ್ತು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಧಾರವಾಡ ಇವರಿಂದ ರಕ್ತದಾನ ಶಿಬಿರವನ್ನು ಹುರಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ಕಾರ್ಯಾಧ್ಯಕ್ಷರಾದ ರಾಜಶೇಖರ ಬೆಳ್ಳಕ್ಕಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ಬಿ.ಎಸ್. ತಾಳಿಕೋಟಿ, ಕ್ಯಾನ್ಸರ ಆಸ್ಪತ್ರೆಯ ವೈದ್ಯರಾದ ಉಮೇಶ ಹಳ್ಳಿಕೇರಿ, ರೆಡ್‌ಕ್ರಾಸ್ ಸಂಸ್ಥೆ, ಧಾರವಾಡ ಇದರ ಅಧ್ಯಕ್ಷರಾದ ಮಾಂತೇಶ ವೀರಾಪುರ, ರೆಡ್‌ಕ್ರಾಸ್ ಸಂಸ್ಥೆ, ಧಾರವಾಡ ಇದರ ಸದಸ್ಯರಾದ ಎಸ್.ಜಿ.ಹಿರೇಮಠ, ಹುರುಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀಮತಿ ಸವಿತಾ ಪಾಟೀಲ, ಅವ್ವಪ್ಪಣ್ಣ ಅತ್ತಿಗೇರಿ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಎಸ್. ಎಂ.ಬಮ್ಮನಗೌಡರ, ಕಚೇರಿ ಅಧಿಕ್ಷಕರಾದ ಶಿವಲಿಂಗ ನೀಲಗುಂದ, ಎನ್‌ಎಸ್‌ಎಸ್ ಅಧಿಕಾರಿಯಾದ ಬಿ.ಬಿ.ಸಂತೋಜಿ, ಸಿಬ್ಬಂದಿಗಳಾದ ಡಾ.ಎಸ್.ಎಸ್. ಗಾಳಿಮಠ, ಡಿ.ಬಿ.ಬಿರಾದಾರ, ಬಿ.ಎಸ್.ಸವಡಿ, ಎಸ್.ಬಿ.ಮಗದುಮ್, ಶ್ರೀಮತಿ.ಸಾವಿತ್ರಿ ಸಂಗಣ್ಣವರ, ಶ್ರೀಮತಿ ಮಂಜುಳಾ ತಿಕ್ಕಂಡಿ, ರಾಜು ಪಲ್ಲೇದ, ಶಿವಕುಮಾರ ಬಳಿಗೇರ, ಶಂಕರ ಪಳೋಟಿ, ಮಹಾಂತೇಶ ಕ್ವಾಟಿ, ರಾಘವೇಂದ್ರ ಗುಡೆಣ್ಣನವರ, ಮೃತ್ಯುಂಜಯಅಮರಗೋಳಹಾಗೂವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಿಇಓ ಭುವನೇಶ ಪಾಟೀಲ ಕಾಮಗಾರಿ ವೀಕ್ಷಣೆ



**ಧಾರವಾಡ :** ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ದೇವಿಕೊಪ್ಪ ಗ್ರಾಮ ಪಂಚಾಯತ್ ವ್ಯಾಪ್ತಿಯ ಗಳಗಿನಗಟ್ಟಿ ಗ್ರಾಮಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅವರು ಭೇಟಿ ನೀಡಿ, ನರೇಗಾ ಯೋಜನೆಯ ಬೂದ ನೀರು ನಿರ್ವಹಣಾ ಘಟಕ ಕಾಮಗಾರಿ ಹಾಗೂ ಮಡಿಕಿಹೊನ್ನಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಯ ಘನ ತ್ಯಾಜ್ಯ ನಿರ್ವಹಣಾ ಘಟಕ ಹಾಗೂ ಪಕ್ಕಾ ಗಟಾರ ನಿರ್ಮಾಣ ಕಾಮಗಾರಿಗಳನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಿ.ಎಸ್.ಮೂಗನೂರಮಠ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಹಾಯಕ ನಿರ್ದೇಶಕರು ದೇವಿಕೊಪ್ಪ ಗ್ರಾಮ ಪಂಚಾಯತ್ ಅಧ್ಯಕ್ಷ, ಪಿಡಿಓ ಹಾಗೂ ಇತರ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಬನಹಟ್ಟಿಯ ಹಳ್ಳ ಸ್ವಚ್ಚ ಗೊಳಿಸಿದ ನಗರಸಭೆ



**ರಬಕವಿ-ಬನಹಟ್ಟಿ :** ಬನಹಟ್ಟಿ ನಗರದ ಕಾಡಸಿದ್ಧೇಶ್ವರ ದೇವಸ್ಥಾನದ ಪಶ್ಚಿಮ ಭಾಗದಲ್ಲಿ ಹರಿಯುತ್ತಿರುವ ಚರಂಡಿ ನೀರಿನಿಂದ ಹಳ್ಳ ಗಬ್ಬೆದ್ದು ನಾರುತ್ತಿತ್ತು. ಒಂದು ರೀತಿಯ ನರಕಸದೃಶ ಸ್ಥಿತಿ ನಿರ್ಮಾಣವಾಗಿತ್ತು. ನಗರಸಭೆ ಆರೋಗ್ಯ ವಿಭಾಗದ ಅಧಿಕಾರಿಗಳು ಸ್ವತಃ ಮುಂದೆ ನಿಂತು ಗಬ್ಬೆದ್ದು ನಾರುತ್ತಿರುವ ಹಳ್ಳವನ್ನು ಸ್ವಚ್ಛಗೊಳಿಸುವ ಕಾರ್ಯ ನಡೆಸಿದರು.

ಶನಿವಾರ ಬೆಳಿಗ್ಗೆ ಈ ಕಾರ್ಯಕ್ಕೆ ಮುಂದಾದ ಅಧಿಕಾರಿಗಳು, ಚರಂಡಿ ನೀರು ಇದೇ ಹಳ್ಳದ ಮುಖಾಂತರ ಹರಿದುಹೋಗಿ ಪವಿತ್ರ ಕೃಷ್ಣಾ ನದಿ ಸೇರುತ್ತದೆ. ಕಳೆದ ಒಂದು ವರ್ಷದಿಂದ ಈ ಹಳ್ಳದಲ್ಲಿ ಗಲೀಜು ತುಂಬಿ ಗಬ್ಬೆದ್ದು ನಾರುತ್ತಿತ್ತು. ಇದನ್ನರಿತ ನಗರಸಭೆಯವರು ಪೌರಾಯುಕ್ತ ಜಗದೀಶ ಈಟಿ ಅವರ ನೇತೃತ್ವದಲ್ಲಿ ನಗರಸಭೆ ಆರೋಗ್ಯ ಇಲಾಖೆ ಅಧಿಕಾರಿಗಳು ಸ್ವಚ್ಚಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದರು.

ಈಗ ಬೇಸಿಗೆ ಪ್ರಾರಂಭವಾಗಿ ಸೊಳ್ಳೆಗಳ ಕಾಟ ಅತೀವ ಹೆಚ್ಚಾಗಿದ್ದು, ಜನರ ಆರೋಗ್ಯದ ಹಿತದೃಷ್ಟಿಯಿಂದ ರಾತ್ರಿಹೊತ್ತು ಫಾಗಿಂಗ್ ಮಷಿನ್ ಮುಖಾಂತರ ಹೊಗೆ ಸಿಂಪಡಿಸುವ ಕಾರ್ಯ ಕೂಡಾ ನಡೆದಿದೆ. ಈ ಹಳ್ಳ ಸ್ವಚ್ಚಗೊಳಿಸುವುದರಿಂದ ಇಲ್ಲಿ ಸಮೀಪದಲ್ಲಿ ವಾಸಿಸುವ ನಿವಾಸಿಗರು ನಿಟ್ಟುಸಿರು ಬಿಡುವಂತಾಗಿದೆ. ಮುಂಜಾನೆಪ್ರಾರಂಭವಾದಜೆಸಿಬಿಮಧ್ಯಾಹ್ನದವರೆಗೂ ಸಪ್ಪಳ ಮಾಡುತಿತ್ತು. ನಗರಸಭೆಯ ಈ ಕಾರ್ಯಕ್ಕೆ ಜನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನಗರಸಭೆ ಹಿರಿಯ ಆರೋಗ್ಯ ಅಧಿಕಾರಿ ಶೋಭಾ ಹೊಸಮನಿ, ಸಿಬ್ಬಂದಿಗಳಾದ ರಾಮ ಬಸಪ್ಪಗೋಳ, ಪ್ರದೀಪ ನಡುವಿನಮನಿ ಸೇರಿದಂತೆ ಅನೇಕರು ಹಾಜರಿದ್ದರು.

# ಮರೆಯಾಗುತ್ತಿರುವ ಗುಬ್ಬಚ್ಚಿಗಳ ರಕ್ಷಣೆ ಅಗತ್ಯ



**ರಬಕವಿ-ಬನಹಟ್ಟಿ :** ವಿಶ್ವ ಗುಬ್ಬಿಗಳ ದಿನದಂದು ನಾವು ಗುಬ್ಬಿಗಳನ್ನು ಪ್ರೀತಿಸುವುದರ ಜೊತೆಗೆ ಅವುಗಳ ರಕ್ಷಣೆಗೆ ಮುಂದಾಗಬೇಕು ಎಂದು ರಬಕವಿ ಬನಹಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯ ಶಿವಾನಂದ ಹಂದಿಗುಂದ ತಿಳಿಸಿದರು.

ಅವರು ಇತ್ತೀಚೆಗೆ ಎಸ್. ಟಿ. ಸಿ. ಕಾಲೇಜಿನಲ್ಲಿ ಗುಬ್ಬಿಗಳ ದಿನದ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್ ಮಾತನಾಡಿ, ಸಕಲ ಪ್ರಾಣಿ ಪಕ್ಷಿಗಳ ರಕ್ಷಣೆ ಇಂದಿನ ಅಗತ್ಯವಾಗಿದೆ. ಹವಾಮಾನ ವೈಪರಿತ್ಯ ಮತ್ತು ಆಧುನಿಕ ತಂತ್ರಜ್ಞಾನಗಳಿಂದಾಗಿ ಪಕ್ಷಿ ಸಂಕುಲಕ್ಕೆ ಅತೀವ ತೊಂದರೆಯಾಗಿದೆ. ಈ ದಿಶೆಯಲ್ಲಿ ಗುಬ್ಬಿ ಸೇರಿದಂತೆ ಎಲ್ಲ ಪಕ್ಷಿಗಳನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಬೇಸಿಗೆಯ ಸಂದರ್ಭದಲ್ಲಿ ಅವುಗಳಿಗೆ ನೀರು ಮತ್ತು ಧಾನ್ಯಗಳನ್ನು ನೀಡುವುದು ಅಗತ್ಯವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಆವರಣದಲ್ಲಿಯ ಹತ್ತಾರು ಗಿಡ ಮರಗಳಲ್ಲಿ ಪಕ್ಷಿಗಳಿಗೆ ನೀರು ಮತ್ತು ಧಾನ್ಯದ ವ್ಯವಸ್ಥೆಯನ್ನು ಮಾಡಲಾಯಿತು.

ರಾಹುಲ ಜಾಧವ, ಮನೋಹರ ಶಿರಹಟ್ಟಿ, ಪ್ರಕಾಶ ಕೆಂಗನಾಳ, ರಮೇಶ ಮಾಗುರಿ, ವಿ. ವೈ. ಪಾಟೀಲ, ಮಹಾವೀರ ಸಂಕಾರ, ಶಿವು ಇಟ್ನಾಳ, ಚೇತನ ಮುಳೆಗಾವಿ, ಐ. ಜಿ. ಫಣಿಬಂದ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ನೀರಿಲ್ಲದ್ದರಿಂದ ಕ್ರಿಕೆಟ್ ಮೈದಾನವಾದ ಜಿಎಲ್ಬಿಸಿ ಕಾಲುವೆ ಭಣಗುಡುತ್ತಿರುವ ಕೆರೆ: ಘಟಪ್ರಭೆಯತ್ತ ಮೊರೆ



**ಚಿಮ್ಮಡ :** ಇಲ್ಲಿನ ಘಟಪ್ರಭಾ ಎಡದಂಡೆ ಕಾಲುವೆಗೆ (ಜಿಎಲ್ಬಿಸಿ) ಕಳೆದ ಒಂದು ತಿಂಗಳಿನಿಂದ ನೀರು ಹರಿಸದ್ದರಿಂದ ಕಾಲುವೆಗಳು ಮಕ್ಕಳ ಕ್ರಿಕೆಟ್ ಆಟದ ಮೈದಾನವಾಗಿ ಮಾರ್ಪಟ್ಟಿದ್ದು ಕೆರೆಗಳು ಒಣಗಿದ ಪರಿಣಾಮ ರಣರಣಿಸುತ್ತಿವೆ.

ಹಿಂಗಾರು ಹಂಗಾಮಿಗಾಗಿ ಕಳೆದ ಒಂದು ತಿಂಗಳ ಹಿಂದೆಯಷ್ಟೆ ಈ ಕಾಲುವೆಗೆ ನೀರು ಹರಿಸಲಾಗಿತ್ತು. ಅದರಿಂದ ಈ ಭಾಗದ ಕೆರೆಗಳಿಗೆಲ್ಲ ನೀರು ತುಂಬಿಸಲಾಗಿತ್ತು. ಆದರೆ ಕೆರೆಯ ನೀರು ಸೋರಿಕೆಯಾದ ಕಾರಣ ಕೇವಲ ಹದಿನೈದು ದಿನಗಳಲ್ಲಿಯೇ ಕೆರೆ ಖಾಲಿಯಾಗಿ ಭಣಗುಡುತ್ತಿವೆ. ಅಂತರ್ಜಲ ಮಟ್ಟ ಕುಸಿತದ ಪರಿಣಾಮ ಈ ಭಾಗದ ಭಾವಿಗಳ ನೀರು ಸಾಕಾಗದೆ ಬೆಳೆಗಳು ಒಣಗುತ್ತಿವೆ. ಇದರಿಂದ ಇನ್ನೇನು ಕಟಾವಿಗೆ ಬಂದ ಬೆಳೆಗಳು ರೈತರ ಕೈಕಚ್ಚುವ ಲಕ್ಷಣಗಳು ಕಾಣಿಸುತ್ತಿವೆ. ಇದೇ ಸ್ಥಿತಿ ಮುಂದುವರಿದಲ್ಲಿ ಕುಡಿಯುವ ನೀರಿಗಾಗಿಯೂ ಪರಿತಪಿಸುವಂತಾಗಲಿದ್ದು ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಕೂಡಲೆ ಎಚ್ಚೆತ್ತು ಕಾಲುವೆಗೆ ನೀರು ಹರಿಸುವ ಕ್ರಮ ಕೈಗೊಳ್ಳಬೇಕೆಂದು ಈ ಭಾಗದ ರೈತರು ಒತ್ತಾಯಿಸಿದ್ದಾರೆ.

ಸೋಮವಾರ ಸಭೆ...? ಜಿಎಲ್ಬಿಸಿ ಕಾಲುವೆಗೆ ನೀರು ಹರಿಸುವ ನಿಮಿತ್ಯ ಸೋಮವಾರ ನೀರಾವರಿ ಸಲಹಾ ಸಮಿತಿ ಸಭೆ ನಡೆಯಲಿದ್ದು ಅದರಲ್ಲಿ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ನೀರಾವರಿ ತಜ್ಞರು ಭಾಗವಹಿಸಲಿದ್ದು, ಸಭೆಯಲ್ಲಿ ತೀರ್ಮಾನಿಸಿದರೆ ಕಾಲುವೆಗೆ ನೀರು ಹರಿಯಲಿದೆ ಎಂದು ಜಿ.ಎಲ್.ಬಿ.ಸಿ. ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

# ನರ್ಮದಾ ಸಂಜೀವಿನಿ ವತಿಯಿಂದ ಮಹಿಳಾ ದಿನಾಚರಣೆ

**ಬೀಳಗಿ:** ಮಕ್ಕಳಿಗೆವಿದ್ಯೆಯಜೊತೆಗೆಸಂಸ್ಕಾರ ನೀಡಬೇಕು. ಸಂಪ್ರದಾಯ, ಆಚಾರ ವಿಚಾರ ತಿಳಿಸಿ ಕೊಡಬೇಕು. ಒಳ್ಳೆಯದು ಮತ್ತು ಕೆಟ್ಟದ್ದರ ಕುರಿತು ಸಣ್ಣ ವಯಸ್ಸಿನಲ್ಲಿಯೇ ಮಕ್ಕಳಿಗೆ ತಾಯಂದಿರು ತಿಳಿಸಿಕೊಟ್ಟರೆ ಆ ಮಗು ಸುಸಂಸ್ಕೃತ ದೇಶದ ಸತ್ಪ್ರಜೆಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ ಎಂದು ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಹೇಳಿದರು.

ತಾಲೂಕಿನಜಾನಮಟ್ಟಿಗ್ರಾಮದಲ್ಲಿತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಸಹಯೋಗದಲ್ಲಿ ನರ್ಮದಾ ಸಂಜೀವಿನಿ ಮಹಿಳಾ ಒಕ್ಕೂಟದಿಂದ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಗ್ರಾಮ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಇಂದು ಮಹಿಳೆಯರ ಸಾಧನೆ ಎಲ್ಲ ಕ್ಷೇತ್ರಗಳಲ್ಲಿಯೂ ಇದೆ. ಪ್ರಮುಖವಾಗಿ ತಾಂತ್ರಿಕ, ಸಂಶೋಧನಾ ಹಾಗೂ ಉತ್ಪಾದನಾ ಕ್ಷೇತ್ರಗಳಲ್ಲಿ ಮಹಿಳೆಯರು ದೇಶಕ್ಕೆ ತಮ್ಮದೇಯಾದ ಕೊಡುಗೆಗಳನ್ನು ನೀಡಿದ್ದಾರೆಂದು ಹೇಳಿದರು.

ಓರ್ವ ವ್ಯಕ್ತಿಯ ಬದುಕಿನಲ್ಲಿ ಮಹಿಳೆಯ ಪಾತ್ರ ಬಹು ದೊಡ್ಡದಿರುತ್ತದೆ. ಮನೆಯ ಜವಾಬ್ದಾರಿಯ ನೊಗ ಹೊತ್ತು ಸಮರ್ಥವಾಗಿ ನಿಭಾಯಿಸುವ ಮೂಲಕ ಮನೆಗೆ ಬೆಳಕು ಬೀರುವವರು ಮಹಿಳೆಯರು. ಈಗಿನ ಆಧುನಿಕ ದಿನಗಳಲ್ಲಿ ಶಿಕ್ಷಕಿ, ಇಂಜಿನೀಯರ, ವಿಜ್ಞಾನಿ, ಪೈಲಟ್, ಚಾಲಕಿ, ಯೋಧೆ, ಕ್ರೀಡೆ, ಗಗನಯಾತ್ರೆ ಸೇರಿದಂತೆ ಎಲ್ಲ ರಂಗಗಳಲ್ಲಿಯೂ ಮಹಿಳೆಯರು ಸಾಧನೆಯ ಶಿಖರವನ್ನು ಮುಟ್ಟುತ್ತಿದ್ದಾರೆ. ಚಿತ್ರನಟಿಯರಿಗಿಂತ ವಿವಿಧ ಕ್ಷೇತ್ರದ ಸಾಧಕರು ಮಾದರಿಯಾಗಲಿ ಎಂದು ಹೇಳಿದರು.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಮಂಜುಳಾ ಇದ್ದಲಗಿ ಮಾತನಾಡಿ, ಮಹಿಳೆಯರು ಸ್ವಂತ ಉದ್ಯೋಗ ಮಾಡಿ ಸ್ವಾವಲಂಬಿ ಜೀವನ ನಡೆಸಬೇಕು. ತಾಯಂದಿರು ಮಕ್ಕಳಿಗೆ ಬಾಲ್ಯ ವಿವಾಹ ಮಾಡದೇ, ಉನ್ನತ ಶಿಕ್ಷಣ ಕೊಡಿಸುವ ಮೂಲಕ ಉತ್ತಮ ಬದುಕು ಕಟ್ಟಿಕೊಳ್ಳಲು ಅವಕಾಶ ನೀಡಬೇಕೆಂದು ಹೇಳಿದರು.

ಎನ್.ಆರ್.ಎಲ್.ಎಂ.ನ ವಲಯ ಮೇಲ್ವಿಚಾರಕಪ್ರಕಾಶಚಿಕ್ಕಮಠಮಾತನಾಡಿ, ಸಂಘಗಳು ಬೆಳವಣಿಗೆಯಾದರೆ ಒಕ್ಕೂಟ ಬೆಳವಣಿಗೆ ಆಗುತ್ತದೆ. ಸಾಲ ಪಡೆದು ದುರುಪಯೋಗ ಮಾಡಿಕೊಳ್ಳದೇ, ಸದುಪಯೋಗ ಮಾಡಿಕೊಂಡು ಅಭಿವೃದ್ಧಿ ಹೊಂದಬೇಕು ಎಂದರು.

ಆರೋಗ್ಯ ಇಲಾಖೆಯ ಸುಜಾತಾ ಅಂಗಡಿ ಮಾತನಾಡಿ, ಪೌಷ್ಟಿಕ ಆಹಾರ ಸೇವನೆ ಮಾಡುವ ಮೂಲಕ ಆರೋಗ್ಯವಂತ ಮಕ್ಕಳನ್ನು ಹೆತ್ತು ದೇಶಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು. ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ, ಹಾಲಿ ಸದಸ್ಯೆ ರೇಣುಕಾ ಬಂಡಿ ಅಧ್ಯಕ್ಷತೆ ವಹಿಸಿದ್ದರು. ಪಿಡಿಓ ಮಹಾನಂದಾ ಬೂಸಗೊಂಡ ಪ್ರಾಸ್ತಾವಿಕ ನುಡಿ ಹೇಳಿದರು.

ಅತಿಥಿಗಳಾಗಿ ಗ್ರಾಮ ಪಂಚಾಯಿತಿ ಸದಸ್ಯರಾದ ಮಂಜುಳಾ ಗಾಳಿ, ನಾಗವ್ವ ಮಾದರ, ಗ್ರಾಮ ಪಂಚಾಯತ್ ಕಾರ್ಯದರ್ಶಿ ಈರಣ್ಣ ಬಿಸನಾಳ, ದಾನೇಶ ಹಿರೇಮಠ, ಎಂ. ಡಿ. ಪಾಟೀಲ, ಹನುಮವ್ವ ತಳವಾರ, ರೇಖಾ ಹೊಸಮನಿ, ಒಕ್ಕೂಟದ ಅಧ್ಯಕ್ಷೆ ಲಕ್ಷ್ಮೀಬಾಯಿ ಮಾದರ, ಕಾರ್ಯದರ್ಶಿ ಹನುಮವ್ವ ಹಾದಿಮನಿ, ಖಜಾಂಚಿ ಲಕ್ಷ್ಮೀಬಾಯಿ ತಳವಾರ, ಭೀಮಾಂಬಿಕಾ ಸಿಡ್ಲನ್ನವರ, ಚಂದ್ರವ್ವ ಮಾದರ, ಪವಿತ್ರಾ ಸನ್ನಿ, ಅಕ್ಷತಾ ಹಳ್ಳೂರ, ಪುಷ್ಪಾ ಆಲಗುಂಡಿ, ಸಾವಿತ್ರಿ ಸನ್ನಿ, ತುಳಸವ್ವ ಪತ್ತಾರ ಮತ್ತಿತರರು ಉಪಸ್ಥಿತರಿದ್ದರು.

ರುಕ್ಮೀಣಿ ಬರಗಾಲ ಸೊಗಸಾಗಿ ನಿರೂಪಿಸಿದರು. ಲಕ್ಷ್ಮಣ ಹಳ್ಳೂರ ಸ್ವಾಗತಿಸಿದರು. ಲಕ್ಷ್ಮಣ ಬಂಟನೂರ ವಂದಿಸಿದರು.

# ಗಿಡಗಳಿಗೆ ನೀರು, ಸಾರ್ವಜನಿಕರ ಮೆಚ್ಚುಗೆ

**ತೇರದಾಳ :** ಇಲ್ಲಿನ ಬಸ್ ನಿಲ್ದಾಣ ಬಳಿಯಿಂದ ಪೊಲೀಸ್ ಠಾಣೆಯ ವರೆಗೆ ಇರುವ ಡಿವೈಡರ್‌ನಲ್ಲಿ ಬೆಳೆಸಿರುವ ಗಿಡ-ಸಸಿಗಳಿಗೆ ಪುರಸಭೆಯವರು ಪ್ರತಿದಿನ ಟ್ಯಾಂಕರ್ ಮೂಲಕ ನೀರು ಬಿಡುತ್ತಿದ್ದಾರೆ.

ಹೂವು ಸೇರಿದಂತೆ ಬೇರೆ ಬೇರೆ ಜಾತಿಯ ಗಿಡ-ಸಸಿಗಳನ್ನು ಹಚ್ಚಲಾಗಿದೆ. ಕ್ರಮೇಣವಾಗಿ ಅವುಗಳು ಬೆಳೆಯುತ್ತಿದ್ದು, ಬೇಸಿಗೆಯಲ್ಲಿ ನೀರು ಇಲ್ಲದೆ ಒಣಗಬಾರದು ಎಂಬ ಉದ್ದೇಶದಿಂದ ಪ್ರತಿದಿನ ಎರಡು ಬಾರಿ ಪುರಸಭೆ ಕಾರ್ಮಿಕರು ಟ್ಯಾಂಕರ್ ಮೂಲಕ ನೀರು ಬಿಡುತ್ತಿದ್ದಾರೆ.



ಬಿ.ಎಸ್.ಎನ್.ಎಲ್. ಕಚೇರಿ ಬಳಿ ಇರುವ ಶುದ್ಧ ಕುಡಿಯುವ ನೀರಿನ ಘಟಕದಿಂದ ನೀರು ತಂದು ಗಿಡಗಳಿಗೆನೀರುಬಿಡಿಸಲಾಗುತ್ತಿದೆ. ಕೃಷ್ಣಾ ನದಿಯಿಂದ ಕೂಡ ನೀರು ಸರಬರಾಜು ಆಗುತ್ತಿದ್ದು, ಕೊಳವೆ ಬಾವಿಗಳಲ್ಲಿ ನೀರಿನ ಸಂಗ್ರಹ ಇದೆ. ಸಾರ್ವಜನಿಕರು ವಿನಾಕಾರಣ ನೀರು ಪೋಲು ಮಾಡದೆ ಮಿತವಾಗಿ ಬಳಸಬೇಕೆಂದು ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ ತಿಳಿಸಿದ್ದಾರೆ. ಇನ್ನು ಡಿವೈಡರ್‌ನಲ್ಲಿನ ಗಿಡ-ಸಸಿಗಳಿಗೆ ಪುರಸಭೆಯವರು ನೀರು ಹಾಕುತ್ತಿರುವುದಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ.

# ಬಾಗಲಕೋಟೆ ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ: 'ಕನ್ನಡಕ್ಕಾಗಿ ನಾವೆಲ್ಲ ಒಂದಾಗಬೇಕಿದೆ'






**ನೀರಬೂದಿಹಾಳ:** ಕನ್ನಡ ಭಾಷೆ, ನಾಡು, ನುಡಿಗೆ ಕುತ್ತು ಬಂದಾಗ ನಾವೆಲ್ಲ ಒಂದಾಗಬೇಕಾಗಿದೆ. ಒಗ್ಗಟ್ಟಿನಿಂದ ಹೋರಾಟ ಮಾಡುವ ಮನೋಧೈರ್ಯವನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಹೆಚ್. ಎಸ್. ಸತ್ಯನಾರಾಯಣ ಹೇಳಿದರು.

ಬಾದಾಮಿ ತಾಲೂಕಿನ ನೀರಬೂದಿಹಾಳದಲ್ಲಿ ಇಂದಿನಿಂದ ಎರಡು ದಿನಗಳ ವರೆಗೆ ಕನ್ನಡ ಸಾಹಿತ್ಯಪರಿಷತ್ತು ಬೆಂಗಳೂರು, ಬಾಗಲಕೋಟೆ ಜಿಲ್ಲಾ ಹಾಗೂ ಬಾದಾಮಿ ತಾಲೂಕಾ ಘಟಕಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಬಾಗಲಕೋಟೆ ಜಿಲ್ಲಾ ಹನ್ನೆರಡನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿದ ಅವರು ಮಾತನಾಡಿದರು.

ಕನ್ನಡ ಸಾಹಿತ್ಯಕ್ಕೆ ಭವ್ಯವಾದ ಇತಿಹಾಸ ಪರಂಪರೆ ಇದೆ. ರನ್ನ, ಪಂಪ, ಬಸವಣ್ಣ, ಅಕ್ಕಮಹಾದೇವಿ ಹೀಗೆ ಅನೇಕರು ಬಳಸಿದ ಕನ್ನಡ ನಾಡು–ನುಡಿಗೆ, ನೆಲ–ಜಲಕ್ಕೆ ಅನೇಕ ರೀತಿಯಲ್ಲಿ ತೊಂದರೆಗಳು ಎದುರುಗೊಳ್ಳುತ್ತವೆ. ಹಾಗಾಗಿ ಇಂತಹ ಸಂದರ್ಭದಲ್ಲಿ ಕೇವಲ ಸರ್ಕಾರವೇ ಮಾಡಬೇಕು ಎನ್ನುವ ತಾತ್ಸಾರ ಮನೋಭಾವನೆ ವ್ಯಕ್ತಪಡಿಸದೇ ಕನ್ನಡಿಗರಾದ ನಾವೆಲ್ಲ ಹೋರಾಟ ಮಾಡಬೇಕಿದೆ. ಕವಿಗಳು ಯಾರ ಹಂಗಿನಲ್ಲಿ ಇರುವುದಿಲ್ಲ. ಹಿಂದಿನ ಪರಂಪರೆಯನ್ನು ಗಮನಿಸಿದಾಗ ಬಹುತೇಕ ಸಾಹಿತಿಗಳು, ಕವಿಗಳು ಪ್ರಭುತ್ವವನ್ನು ವಿರೋಧಿಸುತ್ತಲೇ ಬಂದಿದ್ದಾರೆ ಎಂದು ಅವರು ಹೇಳಿದರು.

ನೀರಬೂದಿಹಾಳದಂತಹ ಹಳ್ಳಿಯಲ್ಲಿ ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುತ್ತಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ಇದೇ ಗ್ರಾಮದಲ್ಲಿ ಜನಿಸಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುತ್ತಿರುವ ಡಾ. ವೈ. ಎಂ. ಯಾಕೊಳ್ಳಿ ಅವರಿಗೆ ಸಮ್ಮೇಳನದ ಸರ್ವಾಧ್ಯಕ್ಷತೆ ಗೌರವ ನೀಡಿರುವುದು ಖುಷಿಯ ವಿಚಾರವಾಗಿದೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಎಸ್. ಜಿ. ನಂಜಯ್ಯನಮಠ ಮಾತನಾಡಿ, ಕನ್ನಡ ಸಾಹಿತ್ಯಕ್ಕೆ ಹಿರಿಮೆ–ಗರಿಮೆ ಇದೆ. ಹಳೆಗನ್ನಡ ಸಾಹಿತ್ಯಕ್ಕೆ ಅನೇಕ ಸಾಹಿತಿಗಳ ಕೊಡುಗೆ ಅಪಾರವಾಗಿದೆ. ಕನ್ನಡ ಸಾಹಿತ್ಯ ಓದುವುದರಿಂದ, ಕೇಳುವುದರಿಂದ ಮನಸ್ಸು ಮಧುರಗೊಳ್ಳುತ್ತದೆ ಎಂದರು.

ಸಮ್ಮೇಳನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ, ಹಟ್ಟಿ ಚಿನ್ನದಗಣಿ ನಿಗಮದ ಅಧ್ಯಕ್ಷ ಜೆ. ಟಿ. ಪಾಟೀಲ ಮಾತನಾಡಿ, ಜಿಲ್ಲೆಯ ಸಾಹಿತಿಗಳಾದ ಕಂದಗಲ್ ಹನಮಂತಯ್ಯ, ಕೆರೂರು ವಾಸುದೇವಚಾರ್ಯ, ಪಿ.ಬಿ.ಧುತ್ತರಗಿ, ಎಚ್. ಆರ್. ಭಸ್ಮೆ ಅವರು ಜಿಲ್ಲೆಯ ಸಾಹಿತ್ಯ, ರಂಗಭೂಮಿ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಅಕ್ಷರ ಕಲಿಯದಿದ್ದರೂ ಬೀಳಗಿ ಕವಿ ಸಿದ್ದಪ್ಪ ಬಿದರಿ ಅವರು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಸಾಹಿತ್ಯ ರಚಿಸಿ ಸ್ವತಃ ತಾವೇ ಹಾಡಿ ಜನರನ್ನು ಜಾಗೃತಿಗೊಳಿಸುವ ಕಾರ್ಯ ಮಾಡುತ್ತಿದ್ದಾರೆ. ನಾನು ಸಾರ್ವಜನಿಕ ಕ್ಷೇತ್ರಕ್ಕೆ ಸೇವೆ ಸಲ್ಲಿಸಲು ನೀರಬೂದಿಹಾಳದ ಆರ್. ಟಿ. ದೇಸಾಯಿ ಅವರು ಪ್ರೇರಣೆಯಾಗಿದ್ದಾರೆ ಎಂದರು.

ಮಾಜಿ ಶಾಸಕ ಎಂ. ಕೆ. ಪಟ್ಟಣಶೆಟ್ಟಿ ಮಾತನಾಡಿ, ಕನ್ನಡ ಭಾಷೆಯನ್ನು ವಿನಾಕಾರಣ ವಿರೋಧಿಸುವ ವಿರೋಧಿಗಳಿಗೆ ತಕ್ಕಪಾಠ ಕಲಿಸುವಂತಹ ಗಟ್ಟಿತನವನ್ನು ಕನ್ನಡಿಗರು ತೋರಬೇಕು. ಅಂದಾಗ ಮಾತ್ರ ಭವಿಷ್ಯದಲ್ಲಿ ಕನ್ನಡಕ್ಕೆ ಉಳಿಗಾಲವಿದೆ ಎಂದರು.

ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ. ತಾತಾಸಾಹೇಬ ಬಾಂಗಿ, ಸಮ್ಮೇಳನಾಧ್ಯಕ್ಷ ಡಾ. ವೈ.ಎಂ.ಯಾಕೊಳ್ಳಿ ಜಿಲ್ಲಾಧಿಕಾರಿ ಜಾನಕಿ ಕೆ. ಎಂ. ಮಾತನಾಡಿದರು. ಕರ್ನಾಟಕ ಸಾಹಿತ್ಯ ಅಕ್ಯಾಡೆಮಿ ಸದಸ್ಯ ಮಹಾದೇವ ಬಸರಕೋಡ, ಶ್ರೀಮತಿ ಪ್ರೇಮಾ ಯಾಕೊಳ್ಳಿ, ರಾಮಲಿಂಗೇಶ್ವರ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಬಸವರಾಜ ಖೋತ, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಡಾ. ಸಾಗರ ತೆಕ್ಕೆನ್ನವರ, ಮಲ್ಲಿಕಾರ್ಜುನ ಶೆಲ್ಲಿಕೇರಿ, ಎಸ್.ಎಸ್.ಭಗವತಿ, ಎಂ.ಎಸ್.ಕಾಳಗಿ, ಎಚ್. ಎಂ. ಯತ್ನಟ್ಟಿ, ಜಿಲ್ಲಾ ಗೌರವ ಕಾರ್ಯದರ್ಶಿ ಡಾ. ಚಂದ್ರಶೇಖರ ಕಾಳನ್ನವರ, ಕೋಶಾಧ್ಯಕ್ಷ ಡಾ. ಸಿ. ಎ. ಜೋಶಿ, ಮಾಧ್ಯಮ ಕಾರ್ಯದರ್ಶಿ ಪ್ರಕಾಶ ಗುಳೇದಗುಡ್ಡ, ಕಸಾಪ ತಾಲೂಕಾ ಅಧ್ಯಕ್ಷ ಬಿ. ಎಫ್. ಹೊರಕೇರಿ, ವಕೀಲ ಬಸವರಾಜ ಗೊಡಚಿ, ಬಸಯ್ಯ ನಂದಯ್ಯಗೋಳ, ಎನ್. ಎನ್. ಪಾಟೀಲ, ಡಾ. ಪಿ. ಪಿ. ಲಮಾಣಿ, ರಾಘವೇಂದ್ರ ಮೆಳ್ಳಿ, ಮಹಾಂತೇಶ ಈಳಗೇರಿ, ಪರಸಪ್ಪ ನೀಲಗುಂದ, ಮಲ್ಲಿಕಾರ್ಜುನ ಪೂಜಾರಿ, ಎಸ್. ಕೆ. ಜವಳಗದ್ದಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ನೀರಬೂದಿಹಾಳದ ಕರ್ನಾಟಕ ಪಬ್ಲಿಕ್ ಸ್ಕೂಲಿನ ಮಕ್ಕಳು ಸುಶ್ರಾವ್ಯವಾಗಿ ನಾಡಗೀತೆ ಹಾಡಿದರು. ಕೆರೂರು ಗೌರಿಗಣೇಶ ಸಾಂಸ್ಕೃತಿಕ ಮತ್ತು ಗ್ರಾಮೀಣ ಅಭಿವೃದ್ಧಿ ಸಂಘದ ಕಲಾವಿದರು ರೈತ ಗೀತೆ ಪ್ರಸ್ತುತ ಪಡಿಸಿದರು. ಹಿರಿಯ ಸಾಹಿತಿ ಶಿವಾನಂದ ಪೂಜಾರಿ ಸ್ವಾಗತಿಸಿದರು. ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಗೌರವ ಕಾರ್ಯದರ್ಶಿ ಡಾ. ಚಂದ್ರಶೇಖರ ಕಾಳನ್ನವರ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ. ಎಸ್. ನಾಗನೂರ ಸೊಗಸಾಗಿ ನಿರೂಪಿಸಿದರು. ಜಿಲ್ಲಾ ಕೋಶಾಧ್ಯಕ್ಷ ಡಾ. ಸಿ. ಎಂ. ಜೋಶಿ ವಂದಿಸಿದರು.

# ಗೋಷ್ಠಿ ಒಂದು: ಜಿಲ್ಲಾದರ್ಶನ ಗೋಷ್ಠಿ ಜಿಲ್ಲೆಗೆ ಶ್ರೀಮಂತ ಇತಿಹಾಸವಿದೆ: ಖೋತ





**ನೀರಬೂದಿಹಾಳ :** ಅಖಂಡ ವಿಜಯಪುರ ಜಿಲ್ಲೆಯಿಂದ ಬೇರ್ಪಟ್ಟ ಬಾಗಲಕೋಟೆ ಜಿಲ್ಲೆಯು ತನ್ನ ಶ್ರೀಮಂತವಾದ ಇತಿಹಾಸವನ್ನು ಉಳಿಸಿ–ಬೆಳೆಸಿಕೊಂಡು ಬಂದಿದೆ ಎಂದು ಸಾಹಿತಿ ಡಾ. ಬಸವರಾಜ ಖೋತ ಅಭಿಪ್ರಾಯ ವ್ಯಕ್ತಪಡಿಸಿದರು.

ಬಾದಾಮಿ ತಾಲೂಕಿನ ನೀರಬೂದಿಹಾಳದಲ್ಲಿ ಇಂದಿನಿಂದ ಎರಡು ದಿನಗಳ ವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಬಾಗಲಕೋಟೆ ಜಿಲ್ಲಾ ಹಾಗೂ ಬಾದಾಮಿ ತಾಲೂಕಾ ಘಟಕಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಬಾಗಲಕೋಟೆ ಜಿಲ್ಲಾ ಹನ್ನೆರಡನೇ ಕನ್ನಡ ಸಾಹಿತ್ಯ ಸಮ್ಮೇಳನದ ಜಿಲ್ಲಾ ಗೋಷ್ಠಿ ಒಂದರ ಜಿಲ್ಲಾ ದರ್ಶನದಲ್ಲಿ ಅವರು 'ಬಾಗಲಕೋಟೆ ಜಿಲ್ಲೆಯ ಇತಿಹಾಸ' ಎಂಬ ವಿಷಯ ಮಂಡನೆ ಮಾಡಿದರು.

ಐತಿಹಾಸಿಕ, ಸಾಮಾಜಿಕ, ಶೈಕ್ಷಣಿಕ, ನೀರಾವರಿ, ಕೃಷಿ, ವಿಜ್ಞಾನ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡುತ್ತಾ ನಾಡಿನಲ್ಲಿ ತನ್ನದೆಯಾದ ಹೆಸರು ಗಳಿಸಿರುವ ಬಾಗಲಕೋಟೆ ಜಿಲ್ಲೆ ಶ್ರೀಮಂತಿಕೆ ಹೊಂದಿರುವ ಜಿಲ್ಲೆಯಾಗಿದೆ ಎಂದರು.

ಮೋಡಿಲಿಪಿ ತಜ್ಞ ಡಾ. ಸಂಗಮೇಶ ಕಲ್ಯಾಣಿ ಅವರು 'ಜಿಲ್ಲೆಯ ಅಭಿವೃದ್ಧಿಯ ಹೊಸ ಸಾಧ್ಯತೆಗಳು' ಎಂಬ ವಿಷಯ ಮಂಡಿಸಿದರು.

ಜಮಖಂಡಿಯ ಸಾಹಿತಿ ಡಾ. ಬಸವರಾಜ ಕಡ್ಡಿ ಅವರು ಸಾರಥ್ಯ ವಹಿಸಿದ್ದರು.

ಬಾಗಲಕೋಟೆ ಸಾಹಿತಿ ಡಾ. ಸಹಜಾನಂದ ಕೆಂಗಲಗುತ್ತಿ ಅವರು ಆಶಯ ನುಡಿ ಹೇಳಿದರು. ನಿವೃತ್ತ ಪ್ರಾಚಾರ್ಯ ಡಾ. ಬಿ. ಎಂ. ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹುನಗುಂದ ಕಸಾಪ ಅಧ್ಯಕ್ಷ ಮಲ್ಲಿಕಾರ್ಜುನ ಸಜ್ಜನ ಸೊಗಸಾಗಿ ನಿರೂಪಿಸಿ, ವಂದಿಸಿದರು.

# ಪ್ರಶಿಕ್ಷಣಾರ್ಥಿಗಳು ನೀರಿನ ಕುರಿತು ಜಾಗೃತಿ ಮೂಡಿಸಿ ನೈಸರ್ಗಿಕ ಸಂಪನ್ಮೂಲಗಳನ್ನು ಉಳಿಸಿ ಬೆಳೆಸಿ



**ರಬಕವಿ–ಬನಹಟ್ಟಿ :** ಇಂದಿನ ದಿನಗಳಲ್ಲಿ ಪ್ರತಿಯೊಬ್ಬರೂ ನೀರಿನ ಮಹತ್ವವನ್ನು ಅರಿತುಕೊಳ್ಳಬೇಕು. ಸಕಲ ಪ್ರಾಣಿ, ಪಕ್ಷಿ, ಜೀವಸಂಕುಲಕ್ಕೆ ಶುದ್ಧವಾದ ನೀರು, ಗಾಳಿ ಮತ್ತು ಬೆಳಕು ಅಗತ್ಯವಾಗಿದೆ. ವಿಶ್ವ ಜಲ ದಿನಾಚರಣೆಯ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳು ನೀರಿನ ಕುರಿತು ಜಾಗೃತಿಯನ್ನು ಮೂಡಿಸಬೇಕು. ಮುಂದಿನ ದಿನಗಳಲ್ಲಿ ಮಕ್ಕಳಿಗೆ ನೀರಿನ ಮಹತ್ವದ ಅರಿವನ್ನು ಮೂಡಿಸಬೇಕು.

ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಣೆ ಮಾಡುವುದರ ಜೊತೆಗೆ ಅವುಗಳನ್ನು ಮುಂದಿನ ಜನಾಂಗಕ್ಕೆ ಕೊಡುವ ಮಹತ್ತರವಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನೀರನ್ನು ನಾವು ಮಿತವಾಗಿ ಬಳಸದಿದ್ದರೆ ಮುಂದೆ ನೀರನ್ನು ನಾವು ತುಪ್ಪದಂತೆ ಚಮಚಗಳಿಂದ ಕುಡಿಯುವ ಪ್ರಸಂಗ ಬಂದೀತು ಎಂದು ಇಲ್ಲಿನ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶ ಆಶಪ್ಪ ಸಣಮನಿ ತಿಳಿಸಿದರು.

ಅವರು ಶನಿವಾರ ಬನಹಟ್ಟಿಯ ಜೆ.ಎಸ್.ಎಸ್. ಶಿಕ್ಷಣ ಕಾಲೇಜಿನಲ್ಲಿ ವಿಶ್ವ ಜಲ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶೆ ಸುಷ್ಮಾ ಟಿ.ಸಿ. ಮಾತನಾಡಿ, ದಿನ ನಿತ್ಯದ ಚಟುವಟಿಕೆಗಳಿಗೆ ನೀರಿನ ಅಗತ್ಯ ಬಹಳಷ್ಟಿದ್ದು, ನೀರನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಬೇಕು ಎಂದರು.

ಕಾಲೇಜು ಉಪನ್ಯಾಸಕಿ ಲಕ್ಷ್ಮಿ ನಿಂಬರಗಿ ಮಾತನಾಡಿ, 2030 ರ ವೇಳೆಗೆ ವಿಶ್ವದ ಪ್ರತಿಯೊಬ್ಬರಿಗೆ ಶುದ್ಧ ಮತ್ತು ನೈರ್ಮಲ್ಯವಾದ ನೀರು ನೀಡುವ ಗುರಿಯನ್ನು ಹೊಂದಲಾಗಿದೆ.

2025 ರ ಜಲ ದಿನಾಚರಣೆಯ ಮುಖ್ಯ ಉದ್ದೇಶವು ಹಿಮಪಾತ ರಕ್ಷಣೆಯಾಗಿದೆ. ಸಿಹಿ ನೀರಿನ ಮೂಲಗಳ ರಕ್ಷಣೆ ಮತ್ತು ಪರಿಸರ ರಕ್ಷಿಸಲು ಮತ್ತು ಭವಿಷ್ಯದ ಮಕ್ಕಳಿಗೆ ನೀರಿನ ಸುರಕ್ಷತೆಯನ್ನು ಖಚಿತಪಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ವಕೀಲ ಅರ್ಜುನ ಜಿಡ್ಡಿಮನಿ ಉಪನ್ಯಾಸ ನೀಡಿದರು. ಕಾಲೇಜು ಪ್ರಾಚಾರ್ಯ ಎಂ. ವಿ. ಬೂದಿ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಸರ್ಕಾರಿ ಅಭಿಯೋಜಕಿ ಭವ್ಯ ಆರ್, ವಕೀಲರ ಸಂಘದ ಕಾರ್ಯದರ್ಶಿ ಎಸ್. ಜಿ. ಸಲಬನ್ನವರ, ಸಹ ಕಾರ್ಯದರ್ಶಿ ಪಿ. ಜಿ. ಪಾಟೀಲ, ಎಸ್. ಬಿ. ಜಿಡ್ಡಿಮನಿ, ಎಸ್. ಎಸ್. ನಡುವಿನಮನಿ, ಗೌರವ್ವ ಮಾದಪ್ಪಗೋಳ, ಲಕ್ಷ್ಮಿ ಉರಭಿನವರ, ಲಕ್ಕವ್ವ ಒಂಟಗುಡಿ, ಪಾರ್ವತಿ ಕಾತ್ರಾಳ, ನಿರ್ಮಲಾ ಭದ್ರಶೆಟ್ಟಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಕನ್ನಡ ಫಿಲಂ ಚೇಂಬರ್ ಬೆಂಗಳೂರು ಕಡೆಯಿಂದ "ಕೆ ಶಂಕರ್ ಮೆಟ್ರಿಯವರಿಗೆ" ಕಲಾ ಸೇವಾ ರತ್ನ ಪ್ರಶಸ್ತಿಯನ್ನು ನೀಡಲಾಯಿತು."

● ವಾರ್ತಾಲೋಕ ವಾರ್ತೆ




**ಕಂಪ್ಲಿ:– ಮಾರ್ಚ್ 23 :** ಮೆಟ್ರಿ ಗ್ರಾಮದ ಶ್ರೀ ಕೆ ಶಂಕರ ಮೆಟ್ರಿಯವರಿಗೆ ಕನ್ನಡ ಫಿಲಂ ಚೇಂಬರ್ ಬೆಂಗಳೂರು ಇವರು ವರನಟ ಡಾಕ್ಟರ್ ರಾಜಕುಮಾರ್ ಅವರ ಸ್ಪೂರ್ತಿದಾಯಕವಾದ "ಕಲಾ ಸೇವಾ ರತ್ನ" ಪ್ರಶಸ್ತಿಯನ್ನು ಮಾರ್ಚ್ 23 2025 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಗೌರವ ಪ್ರಶಸ್ತಿ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಶ್ರೀ ಕೆ ನಾಗರಾಜ್ ಮತ್ತು ಕನ್ನಡ ಫಿಲಂ ಚೇಂಬರ್ (ರಿ) ಇದರ ಅಧ್ಯಕ್ಷರು:– ಶ್ರೀ ಎಂ.ಎಸ್. ರವೀಂದ್ರ, ಉಪಾಧ್ಯಕ್ಷರು:–ಡಾ.ಎನ್ ಎನ್ ಪ್ರಹ್ಲಾದ್ ,ಖಜಾಂಚಿ:–ಡಾ. ರಾಘವ ದಾನಿ, ಕಾರ್ಯಕಾರಿ ಸಮಿತಿ:–ಶ್ರೀ ವಿಜಯ ಮತ್ತು ಶ್ರೀಮತಿ ನಾಗಲಕ್ಷ್ಮಿ ಪ್ರಶಸ್ತಿ ಪ್ರಧಾನ ಮಾಡಿದರು.

# ಕೆ.ಮಲ್ಲೇಶಪ್ಪ ರಾಜ್ಯ ಉಪಾಧ್ಯಕ್ಷರಾಗಿ ನೇಮಕ



**ಹೊಸಪೇಟೆ: ಮಾರ್ಚ24 :** ರಾಜ್ಯ ಶಾಲಾ ಶಿಕ್ಷಣ ಇಲಾಖಾ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾಗಿ ಕೆ.ಮಲ್ಲೇಶಪ್ಪ ನೇಮಕ ಇವರು ಸಹ ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, (ಪ್ರೌಢಶಾಲಾ ವಿಭಾಗ) ಟಿ.ಬಿ.ಡ್ಯಾಮ್, ಹೊಸಪೇಟೆ, ವಿಜಯನಗರ ಜಿಲ್ಲೆ ಸೇವೆ ಸಲ್ಲಿಸುತ್ತಿದ್ದಾರೆ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮಾನ್ಯರಿಗೆ ಹಾಗೂ ಸಮಸ್ತ ಶಿಕ್ಷಕರ ಬಳಗ ವಿಜಯನಗರ ಜಿಲ್ಲೆ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

**ವರದಿ ಅಂಬರೀಶ್ ನಾಯಕ್**

# ಪ್ರವಾಸೋದ್ಯಮ ಇಲಾಖೆ ಕೌಶಲ್ಯಾಭಿವೃದ್ಧಿ ತರಬೇತಿ: ಅರ್ಜಿ ಆಹ್ವಾನ

**ಬೆಳಗಾವಿ :** 2024–25 ನೇ ಸಾಲಿನ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪ್ರವಾಸೋದ್ಯಮ/ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಲ್ಟಿ ಕ್ಯೂಸಿನ್ ಕುಕ್ ವಿಷಯದ 2ನೇ ಹಂತದ (2nd Batch) ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಅತಿಥ್ಯ ಕ್ಷೇತ್ರಗಳಾದ ಮೈಸೂರಿನ ಫುಡ್‌ಕ್ರಾಫ್ಟ್ ಇನ್‌ಸ್ಟಿಟ್ಯೂಟ್ ಹಾಗೂ ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಅವರ ಮೂಲಕ ಮಲ್ಟಿ ಕ್ಯೂಸಿನ್ ಕುಕ್ ವಿಷಯದ 2ನೇ ಹಂತದ (2nd Batch) ವಸತಿ ಸಹಿತ ತರಬೇತಿ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಮಲ್ಟಿ ಕ್ಯೂಸಿನ್ ಕುಕ್ ತರಬೇತಿ ಪಡೆದವರಿಗೆ ಹೋಟೆಲ್, ರೆಸಾರ್ಟ, ರೆಸ್ಟೋರೆಂಟ್ ಹಾಗೂ ಸ್ವ–ಉದ್ಯೋಗದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ದೊರಕಲಿವೆ.

8ನೇ ತರಗತಿ ಪಾಸಾದ ಅಭ್ಯರ್ಥಿಗಳಿಗೆ Multi Cuisine Cook ತರಬೇತಿಯನ್ನು IHM, Banglore ಹಾಗೂ FCI Mysore ಸಂಸ್ಥೆಗಳಲ್ಲಿ ಹಾಗೂ 10ನೇ ತರಗತಿ ಪಾಸಾದ ಅಭ್ಯರ್ಥಿಗಳಿಗೆ Food & Beverage Service Steward ತರಬೇತಿಯನ್ನು FCI Mysore ಸಂಸ್ಥೆಯಲ್ಲಿ ತರಬೇತಿ ನೀಡಲಾಗುವುದು. ಆಸಕ್ತ ಅರ್ಹ ಅಭ್ಯರ್ಥಿಗಳು ಏಪ್ರಿಲ್ 2, 2025ರ ಒಳಗಾಗಿ ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಸುವರ್ಣ ವಿಧಾನ ಸೌಧ, ತಳ ಮಹಡಿ, ಪೂರ್ವದ್ವಾರ ಪ್ರವೇಶ, ಕೊಠಡಿ ಸಂಖ್ಯೆ–ಟಿ.ಪಿ–14, ಹಲಗಾ, ಬೆಳಗಾವಿ ಇಲ್ಲಿ ನಿಗಧಿತ ಅರ್ಜಿಗಳನನ್ನು ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಭರ್ತಿ ಮಾಡಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0831–2470879 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯ ಸರ್ಕಾರ ಮುಸ್ಲಿಮರ ತುಷ್ಟಿಕರಣಕ್ಕೆ ನಿಂತಿದೆ ಅನಿಲ್ ನಾಯ್ಡು ಆರೋಪ




● ವಾರ್ತಾಲೋಕ ವಾರ್ತೆ

**ಬಳ್ಳಾರಿ. ಮಾರ್ಚ್ 24 :** ಕಾಂಗ್ರೆಸ್ ರಾಜ್ಯ ಸರ್ಕಾರ ಪ್ರತಿಯೊಂದರಲ್ಲೂ ಮುಸ್ಲಿಂ ಜನಾಂಗದ ತುಷ್ಟಿಕರಣ ಮಾಡುತ್ತಾ ಹೊರಟಿದೆ ರಾಜ್ಯ ಸರ್ಕಾರಕ್ಕೆ ಮುಸ್ಲಿಮರ ಹೊರತು ಬೇರೆ ಯಾರು ಕಾಣಿಸುತ್ತಿಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಾನು ಕೇವಲ ಮುಸ್ಲಿಮರಿಗಷ್ಟೇ ಮುಖ್ಯಮಂತ್ರಿ ಎಂದು ತಿಳಿದುಕೊಂಡಿದ್ದಾರೆ ಮುಖ್ಯಮಂತ್ರಿಗಳ ನಡೆಯನ್ನು ನೋಡಿದಲ್ಲಿ ಅವರು ಕೇವಲ ಮುಸ್ಲಿಂ ಜನಾಂಗವನ್ನು ಮಾತ್ರ ಒಲೈಕೆ ಮಾಡಿ ತುಷ್ಟಿಕರಣ ರಾಜಕೀಯ ಮಾಡುತ್ತಿದ್ದಾರೆ ಎಂದು ಭಾರತೀಯ ಜನತಾ ಪಕ್ಷದ ಬಳ್ಳಾರಿ ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು ಆರೋಪಿಸಿದರು.

ನಗರದ ರಾಯಲ್ ಸರ್ಕಲ್ ನಲ್ಲಿ ಇಂದು ಮಾನವ ಸರ್ಪಡೆಯನ್ನು ನಿರ್ಮಿಸಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು,

ಕರ್ನಾಟಕದ ವಿಧಾನಸಭೆಯಲ್ಲಿ ವಿಧಾನ ಸಭಾಧ್ಯಕ್ಷರು ಬಿಜೆಪಿಯ 18 ಶಾಸಕರನ್ನು 6 ತಿಂಗಳ ಕಾಲ ಅಮಾನತು ಮಾಡಿರುವುದು ಸಂಪೂರ್ಣವಾಗಿ ಕಾನೂನು ಬಾಹಿರ, ಅಸಾಂವಿಧಾನಾತ್ಮಕ, ಏಕಪಕ್ಷೀಯ ಹಾಗೂ ಮನಸೋಇಚ್ಛೆಯಿಂದ ತೆಗೆದುಕೊಂಡ ತೀರ್ಮಾನ ಹಾಗೂ ಜನರಿಂದ ಆಯ್ಕೆಯಾದ ಶಾಸಕರಿಗೆ ಅಷ್ಟೇ ಅಲ್ಲದೆ ಕ್ಷೇತ್ರದ ಮತದಾರರಿಗೂ ಮಾಡಿದ ಅವಮಾನ ಎಂದು ಬಿಜೆಪಿ ಜಿಲ್ಲಾ ಘಟಕವು

ತೀವ್ರವಾಗಿ ಖಂಡಿಸುತ್ತದೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಶಾಸಕರ ಸಂವಿಧಾನ ದತ್ತ ಹಕ್ಕನ್ನು ಕಿತ್ತುಕೊಳ್ಳುವಂತಹ ಸಂವಿಧಾನ ಬಾಹಿರ ನಿರ್ಧಾರವನ್ನು ತೆಗೆದುಕೊಂಡ ವಿಧಾನಸಭಾ ಅಧ್ಯಕ್ಷರ ನಿರ್ಧಾರವನ್ನು ಬಿಜೆಪಿ ಖಂಡಿಸುತ್ತದೆ. ವಿಧಾನ ಸಭಾಧ್ಯಕ್ಷರು ತಮ್ಮ ತೀರ್ಮಾನವನ್ನು ಮರು ಪರಿಶೀಲಿಸಿ ಅಮಾನತು ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದರು.

ಸರಕಾರಿ ಕಾಮಗಾರಿಗಳಲ್ಲಿ ಶೇ 4ರಷ್ಟು

ಕಾಂಗ್ರೆಸ್ ಮತ್ತೊಮ್ಮೆ ತುಷ್ಟಿಕರಣದ ತನ್ನ ಹಳೇ ಚಾಳಿಯನ್ನು ಮುಂದುವರೆಸಿದೆ. ಮೀಸಲಾತಿ ಮುಸ್ಲಿಂರಿಗೆ ನೀಡುವುದು, ಹೊರದೇಶಕ್ಕೆ ವಿದ್ಯಾಭ್ಯಾಸಕ್ಕೆ ಹೋಗುವ ಮುಸ್ಲಿಂ ವಿದ್ಯಾರ್ಥಿಗಳಿಗೆ ನೀಡುವ ಸಹಾಯಧನವನ್ನು 20 ಲಕ್ಷ ರೂ.ಗಳಿಂದ 30 ಲಕ್ಷ ರೂಗಳಿಗೆ ಹೆಚ್ಚಳ ಮಾಡಿರುವುದು, ಶಾದಿ ಭಾಗ್ಯಕ್ಕೆ ಹಣ ನೀಡುವ ನಿರ್ಧಾರ ತೆಗೆದುಕೊಂಡಿರುವುದು ಮತ್ತು

ಮುಸ್ಲಿಂ ಹೆಣ್ಣುಮಕ್ಕಳಿಗೆ ಮಾತ್ರ ಆತ್ಮರಕ್ಷಣೆಗಾಗಿ ವಿಶೇಷ ಅನುದಾನವನ್ನು ನೀಡುವುದು, ಕಾಂಗ್ರೆಸ್‌ನ ತುಷ್ಟಿಕರಣದ ರಾಜಕಾರಣ ಮುಂದುವರೆದ ಭಾಗವಾಗಿದೆ, ರಾಜ್ಯ ಸರಕಾರವು ಬಜೆಟ್‌ನಲ್ಲಿ ಖಅ–ಖಖ ಸಮುದಾಯಗಳಿಗೆ ಮೀಸಲಿಟ್ಟ ಖಅಖಕ–ಖಖಕ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ

ಬಳಸುತ್ತಿರುವುದು ಅತ್ಯಂತ ಖಂಡನೀಯ. ಕಳೆದ 3 ವರ್ಷಗಳಲ್ಲಿ ಸುಮಾರು 39 ಸಾವಿರ ಕೋಟಿ ಹಣವನ್ನು ಬೇರೆ ಉದ್ದೇಶಕ್ಕೆ

ಬಳಸಲಾಗುತ್ತಿರುವುದರಿಂದ ಪರಿಶಿಷ್ಟ ಜಾತಿ–ಪಂಗಡಗಳ (ಖಅ–ಖಖ) ಸಮುದಾಯದ ಜನರಿಗೆ ತೀವ್ರ ಅನ್ಯಾಯವಾಗಿದೆ ಎಂದು ಆರೋಪಿಸಿ, ಕಾಂಗ್ರೆಸ್ ಸರಕಾರದ ನಿರ್ಧಾರವನ್ನು ಬಿಜೆಪಿ ಜಿಲ್ಲಾ ಘಟಕವು ತೀವ್ರವಾಗಿ ವಿರೋಧಿಸುತ್ತದೆ ಎಂದರು .

ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ. 4ರಷ್ಟು ಮೀಸಲಾತಿ ನೀಡುವ ನಿರ್ಧಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ. ಈ ಮೀಸಲಾತಿ ಸಂವಿಧಾನದ ವಿರುದ್ಧವಾಗಿದೆ ಮತ್ತು ಇತರ ಸಮುದಾಯಗಳಿಗೆ ಅನ್ಯಾಯ ಮಾಡುತ್ತದೆ. ಪ್ರತಿಭಟನೆಯ ವೇಳೆ, ಕಾರ್ಯಕರ್ತರು ಘೋಷಣೆಗಳನ್ನು ಕೂಗಿ, ಟೈರ್‌ಗಳನ್ನು ಸುಟ್ಟು, ಸಿದ್ದರಾಮಯ್ಯನವರ ಪ್ರತಿಗಳನ್ನು ದಹಿಸಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕೆ. ಎಸ್ ದಿವಾಕರ್, ಹೆಚ್. ಹನುಮಂತಪ್ಪ, ರೈತ ಮೋರ್ಚಾ ಗುರುಲಿಂಗನಗೌಡ, ಮಹಿಳಾ ಘಟಕದ ಅಧ್ಯಕ್ಷ ಸುಗುಣ, ಎಸ್ ಟಿ ಮೋರ್ಚಾದ ಓಬಳೇಶ್, ಮಾಜಿ ಬುಡಾ ಅಧ್ಯಕ್ಷ ಮಾರುತಿ ಪ್ರಸಾದ್, ಮಹಿಪಾಲ್, ಬಸಲಿಂಗನಗೌಡ, ರಾಣಿ ತೋಟ ವೀರೇಶ್, ಊಳುರ್ ಸಿದ್ದೇಶ್, ಕೃಷ್ಣ ವಾಲ್ಮೀಕಿ, ನಾರಾಯಣ್ ಸ್ವಾಮಿ, ಸೋಮನಗೌಡ, ಮಲ್ಲೇಶ್, ವಿರುಪಾಕ್ಷಿ, ಗೋವಿಂದ ಸೇರಿದಂತೆ ನೂರಾರು ಜನ ಕಾರ್ಯಕರ್ತರು ಉಪಸ್ಥಿತರಿದ್ದರು.

**ವರದಿ ಈ ಜಿ ರೆಡ್ಡಿ**

# ಕರ್ನಾಟಕ ಬಂದ್ ಬಳ್ಳಾರಿ ನೀರಸ ಪ್ರತಿಕ್ರಿಯೆ

● ವಾರ್ತಾಲೋಕ ವಾರ್ತೆ




**ಬಳ್ಳಾರಿ :ಮಾರ್ಚ್ 24:** ಬೆಳಗಾವಿ ಮರಾಠಿ ಪುಂಡರ ಗಲಾಟೆ ಮತ್ತು ಮಹದಾಯಿ ಮೇಕೆದಾಟು ಯೋಜನೆಯನ್ನು ಶೀಘ್ರದಲ್ಲೇ ಜಾರಿಗೊಳಿಸಲು ಇಂದು ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್ ಗೆ ಬಳ್ಳಾರಿಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು

ಇಂದು ಮುಂಜಾನೆಯಿಂದಲೇ ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ ಬಣದ ವತಿಯಿಂದ ಹಲವಾರು ಕಾರ್ಯಕರ್ತರು ನೂರಾರು ಬೈಕ್ಗಳೊಂದಿಗೆ ಬೈಕ್ ರ್ಯಾಲಿ ಮೂಲಕ ನಗರಾದಂತ ಸಂಚರಿಸಿ ಪ್ರತಿಭಟನೆಯನ್ನು ನಡೆಸಿದ್ದು ಬಿಟ್ಟರೆ ಬೇರೆ ಯಾವ ಸಂಘಟನೆಗಳು ಈ ಬಂದ್ ನಲ್ಲಿ ಭಾಗವಹಿಸಿದ್ದು ಕಂಡು ಬರಲಿಲ್ಲ ಬಂದ್ ಉದ್ದೇಶಿಸಿ ಜಿಲ್ಲಾಧಿಕಾರಿಗಳಿಗೆ ಹಕ್ಕುತಾಯಗಳ ಮನವಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿ ಮಾತನಾಡಿದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಜಿಲ್ಲಾಧ್ಯಕ್ಷ ಜಿ ರಾಜಶೇಖರ್, ಕನ್ನಡಿಗರ ಮತ್ತು ಕರ್ನಾಟಕದ ತಂಟೆಗೆ ಯಾರೇ ಬಂದು ತೊಂದರೆ ಕೊಟ್ಟಲ್ಲಿ ನಾವು ಸುಮ್ಮನೆ ಕೂರುವ ಮಾತೇ ಇಲ್ಲ ಕನ್ನಡ ನಾಡು ನುಡಿ ಜಲ ನೆಲದ ಸಮಸ್ಯೆಗೆ ಯಾವತ್ತು ಸಹ ನಮ್ಮ ಪ್ರಾಣ ಪಣಕ್ಕಿಟ್ಟು ಹೋರಾಟ ಮಾಡಲು ಹಿಂಜರಿಯುವುದಿಲ್ಲ ಎಂದು ಅವರು ತಿಳಿಸಿದರು.

ಮಹದಾಯಿ ಯೋಜನೆ ಮೇಕೆದಾಟು ಯೋಜನೆ ಕಳಸಾ ಬಂಡೂರಿ ಜಿಂದಾಲ್ ನಲ್ಲಿ ಸ್ಥಳೀಯರಿಗೆ ಉದ್ಯೋಗ ನವಲಿ ಸಮಾನಾಂತರ ಜಲಾಶಯ ನಿರ್ಮಾಣ ಸೇರಿದಂತೆ ಇತರ ಹಲವು ಹಕ್ಕು ತಾಯಗಳ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಕಚೇರಿಯ ತಹಲ್ದಾರ್ ಅವರಿಗೆ ಸಲ್ಲಿಸಿದರು ಈ ಸಂದರ್ಭದಲ್ಲಿ ಕರವೇ ಶಿವರಾಮೇಗೌಡ ಬಣದ ಪದಾಧಿಕಾರಿಗಳಾದ ಕಟ್ಟಿಗೆ ಸೂರಿ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ಹಾಗೂ ಕಾರ್ಯಕರ್ತರು ಇದ್ದರು.

**ವರದಿ ಈ ಜಿ ರೆಡ್ಡಿ**

VARTHA LOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com